# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




ಅಂತರರಾಷ್ಟ್ರೀಯ ಯೋಗ ದಿನದ ಪ್ರಯುಕ್ತ ರಾಜಸ್ಥಾನದ ಮರುಭೂಮಿ ಪ್ರದೇಶದಲ್ಲಿ ಭಾರತೀಯ ಸೇನೆಯ ಸೈನಿಕರಿಂದ ಯೋಗ ಪ್ರದರ್ಶನ.


ಸಂಪುಟ : 46 ಸಂಚಿಕೆ : 05 ಜ್ಯೇಷ್ಠ–ಆಷಾಢ ಕಲಿಯುಗಾಬ್ದ 5126 1–07–2024 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4


## ಅರಿವ ಸೃಜಿಸಿ, ಜಗವ ಬೆಳಗುವ ಗುರುವಿಗೆ ವಂದನೆ

**ಅಜ್ಞಾನ ತಿಮಿರಾಂಧಸ್ಯ ಜ್ಞಾನಾಂಜನ ಶಲಾಕಾಯ**
**ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀ ಗುರವೇ ನಮಃ।**

ಅಜ್ಞಾನದ ಕತ್ತಲಿನಿಂದ ಕುರುಡಾಗಿದ್ದವನ ಕಣ್ಣನ್ನು ಜ್ಞಾನವೆಂಬ ದೀಪದಿಂದ ತೆರೆಸಿದ ಗುರುವಿಗೆ ಪ್ರಣಾಮಗಳು ಎನ್ನುವುದು ಈ ಮೇಲಿನ ಶ್ಲೋಕದ ಅರ್ಥ. ಈ ಮೇಲಿನ ಸಾಲುಗಳು ಗುರುವಿನ ಮಹತ್ವದ ಕುರಿತು ತಿಳಿಸುವುದರ ಜೊತೆಗೆ ಈ ನಾಡು ಗುರುವಿಗೆ ನೀಡಿದ ಮಹತ್ವದ ಕುರಿತೂ ಸಾರುತ್ತದೆ. ಪ್ರಪಂಚದ ಸಕಲ ಚರಾಚರಗಳನ್ನೂ ಪೂಜ್ಯ ಭಾವದಿಂದ ನೋಡುವ ನಮ್ಮ ಸಂಸ್ಕೃತಿಯಲ್ಲಿ 'ಗುರು' ಹೆಸರಿಗೆ ತಕ್ಕಂತೆ ಮಹತ್ತರವಾದ ಸ್ಥಾನವನ್ನು ಪಡೆದಿದ್ದಾರೆ. ಜಗತ್ತೆಂಬ ಮನೆಯಲ್ಲಿ ಭಾರತ ದೇವರಕೋಣೆಯ ಸ್ಥಾನವನ್ನು ಪಡೆಯುವುದರಲ್ಲಿ ಹಾಗೂ 'ವಿಶ್ವವೆಂಬ ಪಾಠಶಾಲೆಯ ಗ್ರಂಥಾಲಯ ಭಾರತ' ಎಂಬ ಅಭಿದಾನವನ್ನು ಪಡೆಯುವುದರಲ್ಲಿ ಜ್ಞಾನದ ಬೆಳಕನ್ನು ಸಾರುವ ಮೂಲಕ ಪ್ರಪಂಚದ ಅಂಧಕಾರವನ್ನು ಕಳೆದ ಅಗಣಿತ ಗುರುಗಳ ಕೊಡುಗೆ ಅಪಾರ. ಅಂತಹ ಗುರುಪರಂಪರೆಗೆ ಕೃತಜ್ಞತೆಯನ್ನು ಸಲ್ಲಿಸುವ ಸಲುವಾಗಿ ಮತ್ತು ಜಗತ್ತನ್ನು ದೇದೀಪ್ಯಮಾನಗೊಳಿಸುತ್ತಿರುವ ಅಸಂಖ್ಯಾತ ಗುರುಗಳಿಗೆ ವಂದನೆಯನ್ನು ಅರ್ಪಿಸುವುದಕ್ಕಾಗಿ ಆಷಾಢಮಾಸದ ಹುಣ್ಣಿಮೆಯಂದು ಗುರುಪೂರ್ಣಿಮೆಯನ್ನು ಆಚರಿಸುತ್ತೇವೆ.

**ಗುರುಪರಂಪರೆ :** ಭಾರತದಲ್ಲಿ ಗುರುವಿನ ಕಲ್ಪನೆಗೆ ವಿಸ್ತಾರವಾದ ಅರ್ಥವಿದೆ. ಗುರು ಎಂಬ ಶಬ್ದ ಕತ್ತಲೆಯನ್ನು ಹೋಗಲಾಡಿಸುವುದು ಎನ್ನುವುದನ್ನು ಹೇಳುತ್ತದೆ. ನಮ್ಮ ಜೀವನದಲ್ಲಿನ ಅಂಧಕಾರವನ್ನು ಒಬ್ಬ ವ್ಯಕ್ತಿ, ಆತನ ನಡೆ, ನುಡಿ, ಯಾವುದಾದರೊಂದು ಘಟನೆ, ತನ್ನ ಬದುಕಿನ ಅನುಭವ, ಪ್ರಕೃತಿಯ ಪ್ರತಿಯೊಂದು ಕಣಕಣವೂ ಗುರುವಾಗುವ ಸಾಮರ್ಥ್ಯವುಳ್ಳದ್ದು. ತನ್ನಲ್ಲಿನ ಅಂಧಕಾರವನ್ನು ಹೋಗಲಾಡಿಸಿಕೊಳ್ಳುವುದಕ್ಕೆ ಮನಸ್ಸು ಮಾಡಿದರೆ ಸಾಕು ಬದಲಾಗಬೇಕೆಂಬ ಆ ಅರಿವೇ ಗುರುವಿನ ಸ್ಥಾನವನ್ನು ಪಡೆದುಕೊಳ್ಳುತ್ತದೆ. ಇಂತಹ ಸಣ್ಣ ಸಣ್ಣ ಸಂಗತಿಗಳಿಂದ ಹಿಡಿದು ಮಾರ್ಗದರ್ಶನಗೈಯುವ ಗುರುವಿನವರೆಗೂ ಅವರಿಂದ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪ್ರೇರಣೆ ಪಡೆದುಕೊಂಡು ಯಶಸ್ಸುಗಳಿಸಬೇಕಾದ ಸಾಮರ್ಥ್ಯ ಶಿಷ್ಯನಾದವನಿಗೆ ಇರಬೇಕಾಗಿತ್ತು.

ಪ್ರಕೃತಿ ಜ್ಞಾನದ ಆಗರ. ಚೈತನ್ಯದ ಮೂರ್ತರೂಪ. ಪ್ರಕೃತಿಯ ಪ್ರತಿ ಅಂಶವೂ ಉದಾತ್ತವಾದ ಮೌಲ್ಯಗಳನ್ನು ಸಾರುವ ಮೂಲಕ ಮಾರ್ಗದರ್ಶನ ಮಾಡುವ ಶಕ್ತಿಯನ್ನು ಹೊಂದಿದೆ. ಇದನ್ನು ಅರಿತ ಸಾಧು–ಸಂತರು ತಮ್ಮ ಸರ್ವೋನ್ನತ ಜ್ಞಾನ ಪ್ರಾಪ್ತಿಗಾಗಿ ಪ್ರಕೃತಿಯನ್ನು ಅರಿಯುವ ಕಾಯಕಕ್ಕೆ ಮುಂದಾಗುತ್ತಿದ್ದರು. ಪ್ರಕೃತಿಯನ್ನು ಸರಿಯಾಗಿ ಅರ್ಥೈಸಿಕೊಂಡವರು ಖ್ಯಾತ ಜ್ಞಾನಿಗಳಾಗುತ್ತಿದ್ದರು, ಪ್ರಕೃತಿಯನ್ನೇ ಗುರುವಾಗಿ ಸ್ವೀಕರಿಸಿದವರು ವಿಶ್ವಶ್ರೇಷ್ಠಗುರುಗಳಾದರು. ನಮ್ಮ ಅನೇಕ ವ್ಯವಸ್ಥೆಗಳು ಪ್ರಕೃತಿ ಕೇಂದ್ರಿತವಾಗಿರುವುದೂ ಕೂಡ ಪ್ರಕೃತಿಯ ಶ್ರೇಷ್ಠತೆಯ ಕಾರಣಕ್ಕಾಗಿ ಎನ್ನುವುದು ಸರ್ವವಿಧಿತ.

ಗುರು ಒಬ್ಬ ವ್ಯಕ್ತಿಯಾಗಿ ಪ್ರತಿಯೊಬ್ಬ ಶಿಷ್ಯನ ಜೀವನದಲ್ಲಿ ಅವರ್ಣನೀಯ ಸ್ಥಾನವನ್ನು ಗಳಿಸಿರುತ್ತಾರೆ. ತನ್ನ ನಡೆ, ನುಡಿ, ಮಾರ್ಗದರ್ಶನ, ಬೆಂಬಲದ ಮೂಲಕ ವಿದ್ಯಾರ್ಥಿಯ ಸರ್ವಾಂಗೀಣ ಅಭಿವೃದ್ಧಿಗೆ ಕಾರಣೀಭೂತರಾಗುತ್ತಾನೆ. ಭಾರತದಲ್ಲಿ ಅಂತಹ ಗುರುಪರಂಪರೆ ಪ್ರಾಚೀನ ಕಾಲದಿಂದಲೂ ಬೆಳೆದುಕೊಂಡು ಬಂದಿದೆ. ಶ್ರೀರಾಮನಿಗೆ ವಸಿಷ್ಠ, ವಿಶ್ವಾಮಿತ್ರರು, ಶ್ರೀಕೃಷ್ಣನಿಗೆ ಸಾಂದೀಪನಿ ಮಹರ್ಷಿ, ಕೌರವ–ಪಾಂಡವರಿಗೆ ದ್ರೋಣಾಚಾರ್ಯರು, ಚಂದ್ರಗುಪ್ತನಿಗೆ ಚಾಣಕ್ಯ, ಹಕ್ಕ–ಬುಕ್ಕರಿಗೆ ವಿದ್ಯಾರಣ್ಯರು, ಶಿವಾಜಿ ಮಹಾರಾಜರಿಗೆ ಸಮರ್ಥ ರಾಮದಾಸರು ಮತ್ತು ದಾದಾಜಿಕೊಂಡದೇವರು, ವಿವೇಕಾನಂದರಿಗೆ ರಾಮಕೃಷ್ಣ ಪರಮಹಂಸರು ಹೀಗೆ ಅನೇಕ ಗುರು–ಶಿಷ್ಯ ಪರಂಪರೆ





ಭಾರತೀಯ ಮೌಲ್ಯಗಳನ್ನು ಎತ್ತಿಹಿಡಿಯುವುದಲ್ಲದೇ, ಜಗತ್ತಿನಾದ್ಯಂತ ಪಸರಿಸಿ, ಎದುರುಗೊಂಡ ಸವಾಲುಗಳನ್ನು ಹಿಮ್ಮೆಟ್ಟಿಸಿದೆ.

ಈ ಗುರುಶಿಷ್ಯ ಪರಂಪರೆ ಬೆಳೆದು ನಿಂತು ನಾಲಂದಾ, ತಕ್ಷಶಿಲಾ, ವಿಕ್ರಮಶಿಲಾ, ಓದಂತಪುರಿ, ಪುಷ್ಪಗಿರಿ, ವಲ್ಲಭಿ, ಶಾರದಾಪೀಠ ಮುಂತಾದ ವಿಶ್ವವಿದ್ಯಾನಿಲಯಗಳ ರೂಪವನ್ನು ಪಡೆದವು. ಈ ವಿಶ್ವವಿಖ್ಯಾತ ವಿಶ್ವವಿದ್ಯಾನಿಲಯಗಳು ಜಗತ್ತಿನ ಜ್ಞಾನಾರ್ಥಿಗಳನ್ನು ಕೈಬೀಸಿಕರೆಯುವಂತೆ ವ್ಯವಸ್ಥಿತವಾಗಿದ್ದವು. ಪ್ರತಿ ವಿಶ್ವವಿದ್ಯಾನಿಲಯದಲ್ಲೂ ವಿದ್ಯಾರ್ಥಿಗಳ ಆಯ್ಕೆ ಪ್ರಕ್ರಿಯೆಯಿಂದ ಹಿಡಿದು, ಅವರಿಗೆ ನೀಡಲಾಗುತ್ತಿದ್ದ ಶಿಕ್ಷಣದ ಗುಣಮಟ್ಟದವರೆಗೂ ಇಂದಿಗೂ ನಿಬ್ಬೆರಗಾಗುವಂತಹ ಸಂಗತಿಗಳನ್ನು ಒಳಗೊಂಡಿದ್ದವು. ಅವುಗಳಲ್ಲಿನ ಸ್ವ–ತ್ವ ಎಂತದ್ದೆಂದರೆ ಅವುಗಳ ಪಳೆಯುಳಿಕೆ ಅಥವಾ ಸ್ಮೃತಿಯೊಂದರಿಂದಲೇ ಮುಂದಿನ ಸಹಸ್ರಾರು ಪೀಳಿಗೆಗಳ ಜ್ಞಾನಾರ್ಜನೆಯ ಮಾರ್ಗವನ್ನು ಸರಿಪಡಿಸುತ್ತದೆ. ಅದಕ್ಕೆ ನಿದರ್ಶನವೆಂಬಂತೆ ವಿಶ್ವಸಂಸ್ಥೆಯ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಸೇರಿದ್ದ ನಳಂದಾ ವಿಶ್ವವಿದ್ಯಾನಿಲಯ ಇಂದು ಪುನಃ ವೈಭವಯುತವಾಗಿ ನಿರ್ಮಾಣಗೊಂಡು ತನ್ನ ಗತವೈಭವವನ್ನು ನೆನಪಿಸಿಕೊಳ್ಳುವಂತೆ ಮಾಡಿದೆ.

**ವ್ಯಾಸ ಪೂರ್ಣಿಮೆ:** ಗುರುಪೂರ್ಣಿಮೆಯನ್ನು ವ್ಯಾಸಪೂರ್ಣಿಮೆ–ಯೆಂದೂ ಕರೆಯುತ್ತಾರೆ. ವೇದಗಳನ್ನು ನಾಲ್ಕು ಭಾಗಗಳನ್ನಾಗಿ ವಿಂಗಡಿಸಿ ವೇದವ್ಯಾಸರೆನಿಸಿಕೊಂಡ, ಮಹಾಭಾರತವನ್ನು ಭಗವಾನ್ ಶ್ರೀಗಣೇಶನಿಂದ ಬರೆಸಿದ ಮಹಾನ್ ಗುರು ಕೃಷ್ಣದ್ವೈಪಾಯನ ವೇದವ್ಯಾಸರು ಜನಿಸಿದ ದಿನವೇ ಗುರುಪೂರ್ಣಿಮೆ. ಭಾರತೀಯ ಸಾಹಿತ್ಯಕ್ಕೆ, ಸಂಸ್ಕೃತಿಯ ಹಿರಿಮೆ ಗರಿಮೆಯನ್ನು ಉಳಿಸುವುದಕ್ಕೆ, ಇಲ್ಲಿನ ಮೌಲ್ಯಗಳನ್ನು ರಕ್ಷಿಸುವುದಕ್ಕೆ ಅವರು ನೀಡಿದ ಕೊಡುಗೆ ಅಪಾರ. ಪುರಾಣಗಳನ್ನು, ಬ್ರಹ್ಮಸೂತ್ರಗಳನ್ನು ರಚಿಸಿ, ಅವುಗಳನ್ನು ನಾಡಿನ ಜ್ಞಾನಸಂಪತ್ತಾಗಿ, ಮೌಲ್ಯಗಳ ಸಂಪತ್ತಾಗಿ ಕೊಡುಗೆ ನೀಡಿದವರು. ಸಪ್ತಚಿರಂಜೀವಿಗಳಲ್ಲೂ ಒಬ್ಬರಾದ ವ್ಯಾಸ ಮಹರ್ಷಿಗಳು ಈ ನಾಡಿನ ಸ್ವ–ತ್ವವನ್ನು ತಮ್ಮ ಶಿಷ್ಯಂದಿರ ಮೂಲಕ ಪಸರಿಸಿದವರು. ಆದ್ದರಿಂದ ವ್ಯಾಸಪೂರ್ಣಿಮೆಯ ದಿನ ಶ್ರೇಷ್ಠಗುರು ವ್ಯಾಸರನ್ನು ಸ್ಮರಿಸಲಾಗುತ್ತದೆ.

**ಸಂಘದ ಗುರು:** 1925ರಲ್ಲಿ ಪ್ರಾರಂಭವಾದ ರಾಷ್ಟ್ರೀಯ ಸ್ವಯಂಸೇವಕ ಸಂಘ ಹಿಂದೂ ಸಂಘಟನೆ ಮತ್ತು ವ್ಯಕ್ತಿ ನಿರ್ಮಾಣದಿಂದ ರಾಷ್ಟ್ರನಿರ್ಮಾಣ ಎನ್ನುವುದನ್ನು ಧ್ಯೇಯವಾಗಿಸಿಕೊಂಡು ಸಮಾಜದ ನಡುವೆ ಒಂದು ಸಾಮಾಜಿಕ–ಸಾಂಸ್ಕೃತಿಕ ಸಂಘಟನೆಯಾಗಿ ಕಾರ್ಯನಿರ್ವಹಿಸುತ್ತಿದೆ. ಇಂದು ಅತೀ ಹೆಚ್ಚು ಸ್ವಯಂಸೇವಕರನ್ನೊಳಗೊಂಡು ಬೃಹತ್ ಸಂಘಟನೆಯಾಗಿ ಬೆಳೆದಿರುವ ಆರ್‌ಎಸ್‌ಎಸ್ ತನ್ನ ಗುರುವಾಗಿ ಭಗವಾಧ್ವಜವನ್ನು ಸ್ವೀಕರಿಸಿದೆ. 'ಭಗವಾ' – ಕೇಸರಿ ಬಣ್ಣದ ಧ್ವಜ. ಅದು ಈ ನೆಲದ ಅಸ್ಮಿತೆ. ಮಹಾಭಾರತದಲ್ಲಿ ಧರ್ಮದ ಪರ ಇದ್ದ ಅರ್ಜುನನಿಂದ ಹಿಡಿದು ಹಿಂದವೀ ಸಾಮ್ರಾಜ್ಯದ ಸಂಸ್ಥಾಪಕ ಶಿವಾಜಿಯವರೆಗೂ ಬಳಸಲಾದ ಧ್ವಜದ ಬಣ್ಣ ಕೇಸರಿಯೇ ಆಗಿದೆ. ಕೇಸರಿ ಬಣ್ಣ ತ್ಯಾಗ, ಶೌರ್ಯ ಮುಂತಾದ ಮೌಲ್ಯಗಳ ಪ್ರತೀಕವೂ ಹೌದು. ಹೀಗೆ ಈ ನಾಡಿನ ಅಸ್ಮಿತೆಯ ಪ್ರತೀಕವಾದ ಭಗವಾಧ್ವಜವನ್ನು ಗುರುವಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘ ಸ್ವೀಕರಿಸಿದೆ. ಯಾವುದೇ ವ್ಯಕ್ತಿ ಶಾಶ್ವತವಲ್ಲ. ತತ್ವಗಳು ಶಾಶ್ವತ. ಹಾಗಾಗಿ ತತ್ತ್ವ ಕೇಂದ್ರಿತ ವಿಚಾರಗಳು ದೀರ್ಘಕಾಲ ಉಳಿಯುತ್ತವೆ.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಸ್ಥಾಪಕ ಡಾ. ಕೇಶವ ಬಲಿರಾಮ ಹೆಡಗೇವಾರ್ ಅವರ ಹೇಳಿಕೆಯಂತೆ "ನಾವು ಯಾರನ್ನು ಸದ್ಗುಣಗಳ ಸಾಕಾರ ಸ್ವರೂಪನೆಂದೂ, ಸರ್ವಥಾ ಪ್ರಮಾದಾತೀತನೆಂದೂ ಭಾವಿಸುವೆವೋ ಆ ವ್ಯಕ್ತಿಯೇ ನಮ್ಮ ಆದರ್ಶವಾಗಬೇಕು. ಇಲ್ಲವಾದಲ್ಲಿ ಆದರ್ಶವೆಂದು ಭಾವಿಸಲ್ಪಟ್ಟ ವ್ಯಕ್ತಿಯಿಂದ ಏನಾದರೂ ತಪ್ಪಾದರೆ ನಾವು ಬೇರೊಬ್ಬನನ್ನು ಹುಡುಕಬೇಕಾಗುತ್ತದೆ. ಆ ಎರಡನೆಯವನಲ್ಲಿ ದೋಷ ಕಂಡುಬಂದರೆ, ಅವನ ಬಗ್ಗೆ ಇರುವ ಶ್ರದ್ಧೆ ಸಹ ಹಾರಿಹೋಗುವುದು ಸ್ವಾಭಾವಿಕ. ಆಗ ಪುನಃ ನಾವು ಮೂರನೆಯ ವ್ಯಕ್ತಿಯನ್ನು ಹುಡುಕುವಂತೆ ಆದೀತು. ಹೀಗಾದರೆ ನಿತ್ಯವೂ ಹೊಸ ಹೊಸ ವ್ಯಕ್ತಿಯನ್ನು ಆದರ್ಶಕ್ಕಾಗಿ ಹುಡುಕುತ್ತ ಹೊರಡಬೇಕಾಗುತ್ತದೆ. ಆದ್ದರಿಂದ ಆದರ್ಶ ವ್ಯಕ್ತಿಯನ್ನು ಕುರಿತು ಯೋಚಿಸುವಾಗ ದೋಷರಹಿತ ವ್ಯಕ್ತಿಯನ್ನಾರಿಸುವುದೇ ಯೋಗ್ಯ ಅಷ್ಟೇ ಅಲ್ಲ, ನಾವು ಆದರ್ಶವೆಂದು ಭಾವಿಸುವ ಎಲ್ಲ ಗುಣಗಳೂ ಆ ವ್ಯಕ್ತಿಯಲ್ಲಿ ನಮಗೆ ಎದ್ದು ಕಾಣಬೇಕು. ನಾವು ಧ್ವಜವನ್ನೇ ಗುರುವೆಂದು ಭಾವಿಸಿ ಗುರುಪೂರ್ಣಿಮಾ ದಿನದಂದು ಅದನ್ನು ಪೂಜಿಸುತ್ತೇವೆ. ನಾವು ಯಾವ ವ್ಯಕ್ತಿಯನ್ನೂ ಪೂಜಿಸುವುದಿಲ್ಲ. ಏಕೆಂದರೆ ಯಾರೇ ಆಗಲಿ ಅವರು ತಮ್ಮ ಮಾರ್ಗದಲ್ಲಿ ಅಚಲರಾಗಿಯೇ ಇದ್ದಾರು ಎಂಬ ಭರವಸೆಯಾದರೂ ಏನು? ಕೇವಲ ತತ್ತ್ವ ಒಂದೇ ಆ ಅಚಲ ಪದವಿಯಲ್ಲಿ ಇರಬಲ್ಲದು. ಅದನ್ನು ಧ್ವಜವು ಸಾಂಕೇತಿಸುವುದು. ಯಾವ ಧ್ವಜವನ್ನು ನೋಡಿದೊಡನೆ ನಮ್ಮ ರಾಷ್ಟ್ರದ ಸಮಸ್ತ ಇತಿಹಾಸ, ಸಂಸ್ಕೃತಿ ಹಾಗೂ ಪರಂಪರೆಗಳು ನಮ್ಮ ಕಣ್ಣಿಗೆ ಕಟ್ಟುತ್ತವೆಯೋ, ಯಾವುದನ್ನು ಕಂಡ ಕೂಡಲೇ ಹೃದಯದ ಭಾವನೆಗಳು ಉಕ್ಕಿ ಬರುತ್ತವೆಯೋ, ಹೃದಯದಲ್ಲಿ ಅಪೂರ್ವ ಸ್ಫೂರ್ತಿಯ ಸಂಚಾರವಾಗುತ್ತದೆಯೋ ಅಂತಹ ಧ್ವಜವನ್ನೇ ನಾವು ನಮ್ಮ ಗುರುವೆಂದು ಭಾವಿಸುತ್ತೇವೆ" ಈ ಅಂಶಗಳು ಗುರುವಾಗಬಲ್ಲ ತತ್ತ್ವವನ್ನು ಸಾರುತ್ತವೆ. ❐

## ಸಂಸ್ಮರಣೆ

# ಅರಕಲಗೂಡು ನರಸಿಂಗರಾಯ ಕೃಷ್ಣರಾಯ (ಅ.ನ.ಕೃ.)

**(ಮೇ 9, 1908 – ಜುಲೈ 8, 1971).**



ಅರಕಲಗೂಡು ನರಸಿಂಗರಾಯ ಕೃಷ್ಣರಾಯರು ಅನಕೃ ಎಂದೇ ಖ್ಯಾತರಾಗಿದ್ದ ಕನ್ನಡದ ಸಾಹಿತಿ. "ನನ್ನಂಥವರು ಕನ್ನಡಕ್ಕೆ ಅನೇಕರಿದ್ದಾರೆ, ಆದರೆ ನನಗಿರುವುದು ಒಂದೇ ಕನ್ನಡ" ಎಂದು ನುಡಿಯುತ್ತಾ ಕನ್ನಡ ನಾಡು ನುಡಿಗಾಗಿ ಅಪಾರ ಸೇವೆಯನ್ನು ಸಲ್ಲಿಸಿದವರು.

ಅ.ನ.ಕೃ ಅವರು ಬಹುಮುಖ ವ್ಯಕ್ತಿತ್ವದ ಪ್ರತಿಭೆ. ಕಾದಂಬರಿ, ಸಣ್ಣಕಥೆ, ನಾಟಕ, ಹೀಗೆ ಹಲವಾರು ಸಾಹಿತ್ಯದ ಪ್ರಕಾರಗಳಲ್ಲೂ ಕೃಷಿ ಮಾಡಿದ ಯಶೋವಂತರು. ಕನ್ನಡದ ಉಳಿವು ಪ್ರಗತಿಗಾಗಿ 'ಸಂಯುಕ್ತರಂಗ'ವೆಂಬ ಸೇನೆಯನ್ನೇ ಕಟ್ಟಿ ಆ ಸೇನೆಯ ಸೇನಾಧಿಪತಿಯಾಗಿ ಹಲವಾರು ವರುಷ ಬೀದಿಗಿಳಿದು ಹೋರಾಡಿದವರು. ಮಹಾನ್ ವಾಗ್ಮಿಯಾದ ಅವರು ಕನ್ನಡಿಗರಲ್ಲಿ ಕನ್ನಡತನವನ್ನು ಉಕ್ಕಿಸಿದರು. ಇವರು ಕನ್ನಡನುಡಿ, ಕಥಾಂಜಲಿ, ವಿಶ್ವವಾಣಿ ಪತ್ರಿಕೆಗಳ ಹುಟ್ಟು ಹಾಗೂ ಪ್ರಚಾರಕ್ಕೆ ಅಹರ್ನಿಶಿ ದುಡಿದವರು.

ಅ.ನ.ಕೃ. ಅವರು ಹಾಸನ ಜೆಲ್ಲೆಯ ಅರಕಲುಗೂಡಿನಲ್ಲಿ 1908ರ ಮೇ 9ರಂದು ನರಸಿಂಗರಾಯರು ಮತ್ತು ಅನ್ನಪೂರ್ಣಮ್ಮ ದಂಪತಿಗಳ ಮಗನಾಗಿ ಜನಿಸಿದರು. ಅವರ ಬಾಲ್ಯ ಜೀವನದ ಮೇಲೆ ಅಚ್ಚಳಿಯದ ಪ್ರಭಾವ ಬೀರಿದ್ದು ಬೆಂಗಳೂರಿನ ದೇಶೀಯ ವಿದ್ಯಾಶಾಲೆ. ಕೆ. ಸಂಪದ್ಗಿರಿರಾಯರು, ಕಂದಾಡೆ ಕೃಷ್ಣಯ್ಯಂಗಾರ್ ಅವರ ಪಾಠ ಪ್ರವಚನಗಳಿಂದ ಗಟ್ಟಿಗೊಂಡು, ತಾರುಣ್ಯದಲ್ಲೇ ಗಾಂಧೀಜಿ, ಆಲೂರು ವೆಂಕಟರಾಯರು, ಮುದವೀಡು ಕೃಷ್ಣರಾಯರು, ಪಂಡಿತ ತಾರಾನಾಥ, ಕೈಲಾಸಂ ಪ್ರಭಾವಕ್ಕೆ ಒಳಗಾಗಿ ತಮ್ಮ ಮುಂದಿನ ಬದುಕನ್ನು ರೂಪಿಸಿಕೊಂಡರು.

ಅ. ನ. ಕೃ ಅವರು ಮೊದಲು ಕನ್ನಡದಲ್ಲಿ 'ಪ್ರಣಯ ಗೀತೆಗಳು' (1930) ಸಂಕಲನವನ್ನು ಸಂಪಾದಿಸಿ ಪ್ರಕಟಿಸಿದರು. 1932ರಲ್ಲಿ 'ಭಾರತೀಯ ಚಿತ್ರಕಲೆಯಲಿ ರಾಜಾರವಿವರ್ಮನ ಸ್ಥಾನ' ಕನ್ನಡದಲ್ಲಿ ಚಿತ್ರಕಲಾ ವಿಮರ್ಶೆ ಒಳಗೊಂಡ ಮೊದಲ ಪುಸ್ತಕವನ್ನು ಬರೆದರು. ತದನಂತರ ಅವರು ಕರ್ನಾಟಕ, ಹಿಂದೂಸ್ಥಾನಿ ಸಂಗೀತ ಸಂಪ್ರದಾಯಗಳ ಬಗ್ಗೆ ತೋರಿದ ಪ್ರೀತಿ, ಅದಕ್ಕಾಗಿ ಅವರು ಮಾಡಿದ ಪರಿಚಾರಿಕೆ ಅನೇಕ ಕಲಾವಿದರ ಪ್ರೀತಿ, ವಿಶ್ವಾಸಗಳನ್ನು ಗಳಿಸಿಕೊಟ್ಟಿತು. ಅವರು ಕನ್ನಡ ಸಂಗೀತಗಾರರ ಸಹಕಾರವೇ ಇಲ್ಲದೆ, ಯಾವ ಸಾಂಸ್ಥಿಕ, ಸರ್ಕಾರಿ ಬೆಂಬಲವೂ ಇಲ್ಲದೆ ಅನಕೃ ಅವರು ಸಂಗೀತದಲ್ಲಿ ಕನ್ನಡಕ್ಕೆ ಪ್ರಾಶಸ್ತ್ಯ ಬೇಕೇಬೇಕು ಎಂದು ಅರವತ್ತರ ದಶಕದಲ್ಲಿ ಹೋರಾಟ ಆರಂಭಿಸಿದರು. ಇದು ಅವರ ಪ್ರಕಾರ 'ಕನ್ನಡ ಅಸ್ಮಿತೆ'ಯ ಪ್ರಶ್ನೆ. ಅನಕೃ ಅಂದಿನ ಕನ್ನಡ ಸಂಘಟನೆಗಳು ಸೇರಿಕೊಂಡಿದ್ದ 'ಕರ್ನಾಟಕ ಸಂಯುಕ್ತ ರಂಗ'ದ ಅಧ್ಯಕ್ಷರಾಗಿ ಇಡೀ ಸಂಗೀತ ಲೋಕ ಬೆಚ್ಚಿಬೀಳುವಂಥ ಪ್ರತಿಭಟನೆಯನ್ನು ರೂಪಿಸಿದರು. ಇಂದು ಕರ್ನಾಟಕ ಸಂಗೀತದ ಕಾರ್ಯಕ್ರಮಗಳಲ್ಲಿ ಏನಾದರೂ ಕನ್ನಡದ ಕೃತಿಗಳಿಗೆ ಪ್ರಾಮುಖ್ಯ ಸಿಕ್ಕಿದ್ದರೆ, ಹಲವಾರು ವಿದ್ವಾಂಸರು ಕನ್ನಡದಲ್ಲಿ ಕೃತಿಗಳನ್ನು ಸ್ವತಃ ರಚಿಸಿ ಹಾಡುತ್ತಿದ್ದರೆ, ಕನ್ನಡ ಸುಗಮ ಸಂಗೀತ ವಿಸ್ತಾರವಾಗಿ ಬೆಳೆದಿದ್ದರೆ, ಅದರ ಹಿಂದೆ ಅನಕೃ ಅವರ ಹೋರಾಟವಿದೆ.

1943ರ ನವೆಂಬರ್‌ನಲ್ಲಿ ಕರ್ನಾಟಕ ಪ್ರಗತಿಶೀಲರ ಸಂಘ ಅ.ನ.ಕೃ ಅವರ ಮುಂದಾಳತ್ವದಲ್ಲಿ ಸ್ಥಾಪನೆಗೊಂಡಿತು. 1944ರಲ್ಲಿ ಈ ಸಂಘ 'ಪ್ರಗತಿಶೀಲ ಸಾಹಿತ್ಯ', 'ಮ್ಯಾಕ್ಸಿಂ ಗಾರ್ಕಿ ಸಂಸ್ಕರಣ ಗ್ರಂಥ', 'ರಸ ಋಷಿ' ಗ್ರಂಥಗಳನ್ನು ಪ್ರಕಟಿಸಿತು. ಈ ಚಳವಳಿ ಅ.ನ.ಕೃ ಅವರನ್ನು ಮತ್ತಷ್ಟು ಜನಪ್ರಿಯಗೊಳಿಸಿತು. ಅಕ್ಕಯ್ಯ, ಅಣ್ಣ–ತಂಗಿ, ಅದೃಷ್ಟನಕ್ಷತ್ರ, ಅನ್ನದಾತ, ಅನುಗ್ರಹ, ಅಪರಂಜಿ, ಅಭಿಮಾನ, ಅಮೃತಮಂಥನ, ಅರುಳುಮರುಳು, ಆಶೀರ್ವಾದ, ಈ ದಾರಿ ಆ ದಾರಿ, ಈಚಲುಮರದವ್ವ, ಏಣಾಕ್ಷಿ, ಕಂಕಣಬಲ, ಕಟ್ಟಿದ ಬಣ್ಣ, ಕಣ್ಣಿನಗೊಂಬೆ, ಕಣ್ಣೀರು, ಕಬ್ಬಿಣದ ಕಾಗೆ, ಕಲಾವಿದ ಮೊದಲಾದ ಕೃತಿಗಳನ್ನು ಅ.ನ.ಕೃ ಅವರು ರಚಿಸಿದ್ದಾರೆ. ಅವರು ಸುಮಾರು ನೂರಕ್ಕೂ ಹೆಚ್ಚು ಕಾದಂಬರಿಗಳನ್ನು ರಚಿಸಿ ಕಾದಂಬರಿ ಸಾರ್ವಭೌಮ ಎಂದೇ ಪ್ರಸಿದ್ಧಿಯನ್ನು ಪಡೆದಿದ್ದಾರೆ.

ಅ.ನ.ಕೃ ಅವರ ಅಭಿಮಾನಿ ಬಳಗ ಅವರ ಶ್ರೇಷ್ಠ ಕಾದಂಬರಿಯಾದ 'ಸಂಧ್ಯಾರಾಗ' ಕೃತಿಯನ್ನು ಕುರಿತು ರಸ ವಿಮರ್ಶೆಯ 'ಸಂಧ್ಯಾರಾಗ ಪ್ರಶಸ್ತಿ'ಯನ್ನು ಅರ್ಪಿಸಿತು. ಅ.ನ.ಕೃ ಅವರು ಮಣಿಪಾಲದಲ್ಲಿ ನಡೆದ 42ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದರು. 1969ರಲ್ಲಿ ಕನ್ನಡ ಸಾಹಿತ್ಯ ಅಕಾಡೆಮಿಯು ಪ್ರಶಸ್ತಿಯನ್ನು ನೀಡಿತು. 1970ರಲ್ಲಿ ಮೈಸೂರು ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿಯನ್ನಿತ್ತು ಗೌರವಿಸಿತು. ಅದೇ ವರ್ಷ ಅ.ನ.ಕೃ ಕನ್ನಡ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ನೇಮಕಗೊಂಡರು. ಇಂತಹ ಮಹಾನ್ ಸಾಹಿತಿ ತಮ್ಮ 63ನೇ ವಯಸ್ಸಿನಲ್ಲಿ ಇಹಲೋಕವನ್ನು ತ್ಯಜಿಸಿದರಾದರು, ಕೃತಿಗಳು ಹಾಗೂ ಹೋರಾಟದ ಫಲಶ್ರುತಿ ಇಂದಿಗೂ ಜೀವಂತವಾಗಿದೆ.

## ಎಲ್ಲೋ ಕೇಳಿದ ಕಥೆ

### ಅರ್ಹತೆಗೆ ಒಲಿದ ಅದೃಷ್ಟ



ಒಮ್ಮೆ ಯುವಕನೊಬ್ಬ ಪ್ರಸಿದ್ಧ ಕ್ರೀಡಾಪತ್ರಿಕೆ ಏರ್ಪಡಿಸಿದ ಸ್ಪರ್ಧೆಯಲ್ಲಿ ಭಾಗವಹಿಸಿ ಹತ್ತು ಸಾವಿರ ರೂಪಾಯಿಗಳ ಬಹುಮಾನ ಪಡೆದ. ಓದುವುದರಲ್ಲಿ ಸಾಧಾರಣ ವಿದ್ಯಾರ್ಥಿಯಾಗಿದ್ದ ಈತನಿಗೆ ಬಹುಮಾನ ಬಂದಿದ್ದನ್ನು ಕಂಡು ಎಲ್ಲರೂ ಅವನ ಅದೃಷ್ಟ ಚೆನ್ನಾಗಿದೆ ಎಂದು ಹೇಳತೊಡಗಿದರು. ಸಂತೋಷವನ್ನು ವ್ಯಕ್ತಪಡಿಸಿ ಧನ್ಯವಾದಗಳನ್ನು ಅರ್ಪಿಸಿದರು.'ಅಂಥ ಒಂದು ಬಹುಮಾನ ಸಿಕ್ಕೀತೆಂದು ಕನಸಿನಲ್ಲೂ ಯೋಚಿಸಿರಲಿಲ್ಲ' ಎಂದು ಸ್ವತಃ ಆ ಹುಡುಗ ನುಡಿದ. ಅದಕ್ಕೆ ಆತನ ಸ್ನೇಹಿತರು 'ಅದೃಷ್ಟವಲ್ಲದೆ ಮತ್ತೇನು?' ಎಂದರು. ಅವನೂ ನಗುತ್ತ ಹೌದೆಂಬಂತೆ ತಲೆತೂಗಿದ. ಆದರೆ ಬರಿ ಅದೃಷ್ಟ ಕುಲಾಯಿಸಿ ಗೆಲ್ಲುವುದಕ್ಕೆ ಅದು ಲಾಟರಿಯ ಸ್ಪರ್ಧೆಯಾಗಿರಲಿಲ್ಲ. ಮಿತ್ರರೆಲ್ಲ ದೂರ ಸರಿದ ಮೇಲೆ ಆತನೊಬ್ಬನೇ ಇದ್ದಾಗ ಅವನ ಗುರುಗಳು 'ನೀನು ಎಷ್ಟು ವರ್ಷಗಳಿಂದ ಆ ಕ್ರೀಡಾ ಪತ್ರಿಕೆಯನ್ನು ಓದುತ್ತಿದ್ದಿ?' ಎಂದು ಪ್ರಶ್ನಿಸಿದರು. 'ಆರನೇ ತರಗತಿಯಿಂದ' ಎಂದನಾತ. ಪ್ರಶಸ್ತಿ ಪಡೆದಾಗ ಅವನು ಪಿ.ಯು.ಸಿ.ಯಲ್ಲಿದ್ದನು. ಆಗ ಗುರುಗಳು ಅವನಲ್ಲಿದ್ದ ಪ್ರಶಸ್ತಿ ಗೆಲ್ಲುವ ಅರ್ಹತೆಯನ್ನು ಖಚಿತಪಡಿಸಿಕೊಂಡರು. ಆರು ವರ್ಷಗಳ ಕಾಲ ಪ್ರಕಟವಾದ ಪತ್ರಿಕೆಯ ಪ್ರತಿಯೊಂದು ಸಂಚಿಕೆಯನ್ನೂ ತಪ್ಪದೇ ಓದಿದ್ದ. ಆಟೋಟದ ಸ್ಪರ್ಧೆಗಳಲ್ಲಿ, ತತ್ಸಂಬಂಧವಾದ ವಾರ್ತೆಗಳಲ್ಲಿ ಆತನಿಗೆ ಮೊದಲಿನಿಂದಲೂ ಆಸಕ್ತಿ. ಆ ಪತ್ರಿಕೆಗಾಗಿ ಅವನ ಹಂಬಲವಿತ್ತು. ಅದು ಕೈಗೆ ಬಂದೊಡನೆ ಮೊದಲಿನಿಂದ ಕೊನೆಯವರೆಗೆ ಹಲವು ಬಾರಿ ಓದಿದವನು ಆತ. ಈ ಆರು ವರ್ಷ ಪಂದ್ಯಾಟಕ್ಕೆ ಸಂಬಂಧಿಸಿದ ಅಗಾಧ ವಿಚಾರಗಳನ್ನು ಆತ ಸಂಗ್ರಹಿಸಿದ್ದನು. ಆ ಜ್ಞಾನದ ಹಿನ್ನೆಲೆಯಿಂದ ಲಕ್ಷಾಂತರ ಜನರು ಭಾಗವಹಿಸಿದ ಸ್ಪರ್ಧೆಯಲ್ಲಿ ಅತ್ಯುನ್ನತ ಸ್ಥಾನವನ್ನು ಪಡೆಯುವ ಸಾಮರ್ಥ್ಯವನ್ನು ಆತ ಗಳಿಸಿದ. ಬಹುಮಾನದ ಬಗೆಗೆ ಅವನು ಎಂದೂ ಯೋಚಿಸಿರಲಿಲ್ಲ. ಅರ್ಹತೆಯನ್ನು ಹುಡುಕಿಕೊಂಡು ಅದೇ ಅವನ ಬಳಿ ಬರುವಂತಾಯಿತು.

(ಮೂಲ: ಬದುಕಲು ಕಲಿಯಿರಿ)

# "ಬಾಲ ಭಿಕ್ಷುಕ ಮುಕ್ತ ಶಿಕ್ಷಿತ ಸಮಾಜ"

## ಧ್ಯೇಯಕ್ಕಾಗಿ ಟೊಂಕಕಟ್ಟಿನಿಂತ ವಯೋವೃದ್ಧರ ಸಮಾಜಪರ ಕಾಳಜಿಯ ಕಥೆ ಇದು.



ಮೀತಾರಾಮನು ಕೊರತೆಗಳಿಂದ ತುಂಬಿದ್ದ ತನ್ನ ಗತಕಾಲದ ಬಾಲ್ಯವನ್ನು ನೆನೆಯುತ್ತ ಅವನ ಕಣ್ಣುಗಳು ತುಂಬಿ ಬಂದಿತ್ತು. ಪ್ರತೀ ದಿನ ಅಪರಾಧ ಮತ್ತು ನಶೆಯ ಪಾಶಗಳಿಂದ ತಪ್ಪಿಸಿಕೊಳ್ಳುತ್ತಾ, ತನ್ನ ಅಣ್ಣನೊಂದಿಗೆ ಪುಟ್ಟ ಪುಟ್ಟ ಕೈಗಳನ್ನು ಚಾಚುತ್ತಾ, ಬೈಗುಳ, ಅವಮಾನ ಹಾಗೂ ಕೆಲವು ಪುಡಿಗಾಸುಗಳಿಂದ ಜೀವನ ಸಾಗಿಸುತ್ತಿದ್ದ. ಅಂದು ಭಿಕ್ಷೆ ಬೇಡುತ್ತಿದ್ದ ಎರಡೂ ಕೈಗಳು ಇಂದು ಭಿಲ್ವಾಡಾದ ಹೋಟೆಲಿನಲ್ಲಿ ರುಚಿಕರ ಭೋಜನವನ್ನು ತಯಾರಿಸಿ ಎಲ್ಲರ ಹೊಟ್ಟೆಯನ್ನು ತುಂಬಿಸುತ್ತಿವೆ ಎಂದರೆ ಅವನಿಗೆ ನಂಬಿಕೆಯೇ ಬರುತ್ತಿಲ್ಲ.

ತನ್ನ ಜೀವನದಲ್ಲಿ ಉಂಟಾದ ಈ ಅದ್ಭುತ ಪರಿವರ್ತನೆಗೆ ಕಾರಣರಾದ ಸಂಘದ ಸ್ವಯಂಸೇವಕರಾದ 66 ವರ್ಷದ ಜಯಂತಿ ಭಾಯಿ ಮತ್ತು ಅವರ ಪತ್ನಿ ಅರುಣಾ ಬೆನ್ ಅವರನ್ನು ನೆನೆಯುತ್ತಲೇ ಇರುತ್ತಾನೆ. ಸಾಮಾನ್ಯವಾಗಿ ವಯಸ್ಸಾದ ಮೇಲೆ ಜನರು ತಮಗೋಸ್ಕರ ಸಹಾಯವನ್ನು ಅಪೇಕ್ಷಿಸುತ್ತಾರೆ. ಆದರೆ ತಮ್ಮ ಇಳಿವಯಸ್ಸಿನಲ್ಲಿ ಜಯಂತಿ ಭಾಯಿ ಮತ್ತು ಅರುಣಾ ಬೆನ್ ಗುಜರಾತಿನ ಮೆಹಸಾಣಾದಲ್ಲಿ "ಬಾಲ ಭಿಕ್ಷುಕ ಮುಕ್ತ ಶಿಕ್ಷಿತ ಸಮಾಜ" ಎಂಬ ಕಾರ್ಯಕ್ರಮವನ್ನು ನಡೆಸುತ್ತಿದ್ದಾರೆ.

2000ದ ಇಸವಿಯಲ್ಲಿ ತಮ್ಮ ಅಕ್ಕಪಕ್ಕದಲ್ಲಿದ್ದ ಆರರಿಂದ ಹದಿನೈದು ವರ್ಷದವರೆಗಿನ ಬೇರೆಬೇರೆ ನಗರ ಮತ್ತು ರಾಜ್ಯಗಳಿಂದ ಬಂದಿದ್ದ 18 ಮಕ್ಕಳ ವಿಚಾರಣೆ ನಡೆಸಿ, ಜಿಲ್ಲಾಧಿಕಾರಿಗಳ ಅನುಮೋದನೆಯೊಂದಿಗೆ ಸರ್ಕಾರಿ ಜಮೀನಿನಲ್ಲಿ 16 ಟೆಂಟುಗಳನ್ನು ಸಿದ್ಧಮಾಡಿದರು ಮತ್ತು 45 ಮಕ್ಕಳು ಪಾಲಕರೊಂದಿಗೆ ವಾಸಿಸಲು ಪ್ರಾರಂಭಿಸಿದರು. ಇರಲು, ಉಣಲು ಮತ್ತು ತೊಡಲು ಅನುಕೂಲಗಳಾದ ಮೇಲೆ ಮಕ್ಕಳ ಬುದ್ಧಿಶಕ್ತಿ ರಚನಾತ್ಮಕವಾಗಿ ಬೆಳೆಯತೊಡಗಿತು. ಶಿಕ್ಷಣದ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ಆ ಮಕ್ಕಳನ್ನು ಯೋಗ್ಯ ಶಾಲೆಗಳಲ್ಲಿ ದಾಖಲಿಸಲಾಯಿತು. ಭಿಕ್ಷಾವೃತ್ತಿಯನ್ನು ಬಿಟ್ಟು 300ಕ್ಕೂ ಅಧಿಕ ಮಕ್ಕಳು ಶಾಲೆಗಳಲ್ಲಿ ಇಂದು ಭರ್ತಿ ಆಗಿದ್ದಾರೆ.

ಕಳೆದ 20 ವರ್ಷಗಳಿಂದ ನಡೆದು ಬರುತ್ತಿರುವ ಈ ಯೋಜನೆಯು ಮೀತಾರಾಮನಂತಹ 200 ಯುವಕ ಯುವತಿಯರಿಗೆ ಅಡುಗೆ, ಡ್ರೈವಿಂಗ್, ಪ್ಲಂಬಿಂಗ್ ಕೆಲಸ ಹಾಗೂ ಬೇರೆಬೇರೆ ಫ್ಯಾಕ್ಟರಿಗಳಲ್ಲಿ ಕೆಲಸ ಮಾಡುವ ಮೂಲಕ ತಮ್ಮ ಕಾಲ ಮೇಲೆ ನಿಲ್ಲಲು ಪ್ರೇರಣೆ ಹಾಗೂ ಶಕ್ತಿಯನ್ನು ನೀಡುತ್ತಿದೆ. ಇಂದು ಅವರೆಲ್ಲ ಆತ್ಮನಿರ್ಭರರಾಗಿ ಸ್ವತ: ತಮ್ಮ ಬದುಕನ್ನು ನೋಡಿಕೊಳ್ಳುವುದಲ್ಲದೇ ಇತರರಿಗೂ ಸಹಯೋಗ ನೀಡುತ್ತಿದ್ದಾರೆ. ಸುಮಾರು 10ಕ್ಕೂ ಹೆಚ್ಚಿನ ಪರಿವಾರಗಳು ಇಂದು ತಮ್ಮ ತಮ್ಮ ಸ್ವಂತ ಮನೆಗಳಲ್ಲಿ ವಾಸಿಸುತ್ತಿದ್ದಾರೆ ಮತ್ತು 22 ಪರಿವಾರಗಳು ಇದೇ ದಿಕ್ಕಿನಲ್ಲಿ ಸಾಗುತ್ತಿವೆ. 20,000ಕ್ಕೂ ಅಧಿಕ ಗಿಡಗಳನ್ನು ಇಲ್ಲಿಯ ತನಕ ನೆಟ್ಟಿರುವ ಶ್ರೀ ಜಯಂತಿ ಭಾಯಿ ಅವರಿಗೆ 2016ರಲ್ಲಿ ಗುಜರಾತ್ ಸರ್ಕಾರವು 'ಗ್ರೀನ್ ಬ್ರಿಗೇಡಿಯರ್' ಪ್ರಶಸ್ತಿಯನ್ನು ನೀಡಿ ಪುರಸ್ಕರಿಸಿತು.

ಹಾಗೆಯೆ ಆಹಾರದ ಮಹತ್ವವನ್ನು ಅರಿತಿದ್ದ ಅರುಣಾ ಬೆನ್ 2015ರಿಂದ ಅಕ್ಷಯ ರಥದ ಪ್ರಾರಂಭವನ್ನು ಮಾಡಿದರು. ಯಾವುದೇ ದೊಡ್ಡ ಸಮಾರಂಭದಲ್ಲಿ ಮಿಕ್ಕ ಶುಚಿಯಾದ ಆಹಾರವನ್ನು ಒಟ್ಟುಗೂಡಿಸಿ, ಎರಡು ಗಂಟೆಗಳ ಒಳಗೆ ಅಗತ್ಯವಿರುವವರಿಗೆ ಮತ್ತು ಸೇವಾ ಬಸತಿಗಳಿಗೆ ಭೋಜನವನ್ನು ತಲುಪಿಸುತ್ತಿದ್ದಾರೆ. ಪ್ರತಿದಿನ 500 ರಿಂದ 5000 ಜನರ ಭೋಜನ ಬೇರೆ ಬೇರೆ ಜಾಗಗಳಿಗೆ ಅಕ್ಷಯ ರಥದ ಮೂಲಕ ವಿತರಿಸಲಾಗುತ್ತದೆ.

"ಭಿಕ್ಷೆ ಬೇಡಬಾರದು" ಎಂದು ಹೇಳುವ ಸಾವಿರಾರು ಜನ ಸಿಗಬಹುದು. ಆದರೆ ಭಿಕ್ಷುಕರಿಗೆ ಆಶ್ರಯ ನೀಡುವವರು, ಅವರ ಕೈಹಿಡಿದು ಸ್ವಾಭಿಮಾನದಿಂದ ಆತ್ಮನಿರ್ಭರತೆಯ ಹಾದಿಯಲ್ಲಿ ನಡೆಸುವವರು, ಕಷ್ಟಗಳನ್ನು ಮೂಲದಿಂದಲೇ ಬೇರುಸಹಿತ ನಿರ್ನಾಮ ಮಾಡುವಂತಹ, ದೇಶಭಕ್ತ ಮತ್ತು ಸಮಾಜಸೇವಕರು ದೊರೆಯುವುದು ಅತಿ ವಿರಳವೇ ಸರಿ.

## ಪುಸ್ತಕ ಪರಿಚಯ


### ಶ್ರೀ ಧರಂಪಾಲ್

ಲೇಖಕ: **ಡಾ. ರೋಹಿಣಾಕ್ಷ ಶಿರ್ಲಾಲು**

ಪ್ರಕಾಶನ: **ಅಯೋಧ್ಯಾ ಪ್ರಕಾಶನ**

ಬೆಲೆ: **110 ರೂ.**

ಅಯೋಧ್ಯಾ ಪ್ರಕಾಶನದ 'ಮರೆಯಬಾರದ ಮಹಾನುಭಾವರು' ಸರಣಿಯಲ್ಲಿ ಕಲಬುರ್ಗಿಯ ಕೇಂದ್ರೀಯ ವಿಶ್ವವಿದ್ಯಾನಿಲಯದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿರುವ ಡಾ.ರೋಹಿಣಾಕ್ಷ ಶಿರ್ಲಾಲು ಅವರು ಬರೆದ 'ಭಾರತವೆಂಬ ಬೆಳಕನ್ನು ಜಗಕೆ ತೋರಿದ ಶ್ರೀ ಧರಂಪಾಲ್' ಪುಸ್ತಕ ಭಾರತೀಯತೆಯನ್ನು, ಬ್ರಿಟಿಷ್ ಪೂರ್ವದ ಭಾರತದ ಹಿರಿಮೆಯನ್ನು ತಿಳಿಸುವ ಮಹತ್ವದ ಪುಸ್ತಕವೆನಿಸಿದೆ. ಶ್ರೀ ಧರಂಪಾಲ್ ಭಾರತವನ್ನು ಭಾರತೀಯ ಕಣ್ಣುಗಳಲ್ಲೇ ಕಾಣುವುದಕ್ಕೆ ಪ್ರತಿಪಾದಿಸಿದ ರಾಷ್ಟ್ರಪ್ರೇಮಿ. ಭಾರತ 'ತನ್ನತನ'ದಿಂದಲೇ ಮೇಲೆದ್ದು ನಿಲ್ಲುವಂತಾಗಬೇಕೆಂದು ಭಾರತೀಯರಿಗೆ ತಮ್ಮ ಸ್ವತ್ವದ ಪರಿಚಯ ಮಾಡಿಸಿಕೊಟ್ಟ ಗಾಂಧಿವಾದಿ. 'ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು' ಎಂಬಂತೆ ಬ್ರಿಟಿಷರು ನಿರೂಪಿಸಿದ ಭಾರತದ ಕುರಿತಾದ ಅಪಪ್ರಚಾರಗಳನ್ನು, ಬ್ರಿಟಿಷರ ಸಮೀಕ್ಷೆಯ ವರದಿಗಳನ್ನೇ ಆಧಾರವಾಗಿಸಿಕೊಂಡು ಅವುಗಳನ್ನು ಅಲ್ಲಗಳೆದ ಶ್ರೇಷ್ಠ ಸಂಶೋಧಕ. 1965ರ ನಂತರ ಅವರು ಸಂಗ್ರಹಿಸಿದ ದಾಖಲೆಗಳೇ ಅವರ ಬರೆವಣಿಗೆಗೆ ಮೂಲದ್ರವ್ಯ. ಬ್ರಿಟನ್‌ನ ಆರ್ಕೈವ್‌ಗಳಲ್ಲಿ ಬಚ್ಚಿಡಲಾಗಿದ್ದ, ಬ್ರಿಟಿಷರು ಕಂಡ ನೈಜಭಾರತದ ದಾಖಲೆಗಳನ್ನು ಎರಡು ದಶಕಗಳ ಕಾಲ ಅಧ್ಯಯನ ನಡೆಸಿ, ಹತ್ತಾರು ಕಬ್ಬಿಣದ ಟ್ರಂಕುಗಳಲ್ಲಿ ಸಾವಿರಾರು ಪುಟಗಳ ಅಮೂಲ್ಯ ದಾಖಲೆಗಳನ್ನು ಸಿದ್ಧಪಡಿಸಿ ಭಾರತದ ಶ್ರೇಷ್ಠತೆಯನ್ನು ಜಗತ್ತಿಗೆ ತಿಳಿಸಿದವರು. ಅಂತಹ ಧರಂಪಾಲ್‌ರ ಕುರಿತು ಸಂಕ್ಷಿಪ್ತವಾಗಿ 7 ಅಧ್ಯಾಯಗಳಲ್ಲಿ ಮುಂದಿನ ಪೀಳಿಗೆಗೆ ಪರಿಚಯಿಸುವ ಪ್ರಯತ್ನ ಈ ಪುಸ್ತಕದಲ್ಲಾಗಿದೆ.




ಪುಸ್ತಕಕ್ಕಾಗಿ ಸಂಪರ್ಕಿಸಿ: 7795827307, 6360581957.

**ಸಂಪಾದಕೀಯ ಸಹಕಾರ:** ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯ್ ಕೃಷ್ಣ ಹೆಚ್.ವಿ., ರೂಪಶ್ರೀ ನಾಗರಾಜ್, ದೀಕ್ಷಿತ್ ನಾಯರ್ ಮಂಡ್ಯ, ಪಂಚಮಿ ಬಾಕಿಲಪದವು

## ಜಮ್ಮುಕಾಶ್ಮೀರದಲ್ಲಿ ವಿಶ್ವದ ಎತ್ತರದ ರೈಲ್ವೆ ಸೇತುವೆ ನಿರ್ಮಾಣ



ವಿಶ್ವದ ಅತಿ ಎತ್ತರದ ರೈಲ್ವೆ ಸೇತುವೆ ಎಂಬ ಖ್ಯಾತಿಗೆ ಭಾರತದ ಜಮ್ಮು ಕಾಶ್ಮೀರದ ಚೆನಾಬ್ ರೈಲು ಸೇತುವೆ ಪ್ರಾತವಾಗಿದೆ. ಜಮ್ಮು ಕಾಶ್ಮೀರದ ರಿಯಾಸಿ ಜಿಲ್ಲೆಯಲ್ಲಿರುವ, ಚೆನಾಬ್ ನದಿ ಮೇಲೆ ಕಟ್ಟಿರುವ ಈ ಸೇತುವೆಯನ್ನು, ನದಿಯಿಂದ 1,178 ಅಡಿ ಎತ್ತರದಲ್ಲಿ ನಿರ್ಮಿಸಲಾಗಿದೆ. ಈ ಸೇತುವೆಯು 1.3 ಕಿ.ಮೀ. ಉದ್ದವಿದೆ.

## ಸೇನೆಗೆ ಸ್ವದೇಶಿ ನಾಗಾಸ್ತ್ರ ಬಲ




ಇದೇ ಮೊದಲ ಬಾರಿಗೆ ದೇಶೀಯವಾಗಿಯೇ ನಿರ್ಮಾಣವಾಗಿರುವ ನಾಗಾಸ್ತ್ರ–1 ಅನ್ನು ಭಾರತೀಯ ಸೇನೆಗೆ ಸೇರ್ಪಡೆ ಮಾಡಲಾಗಿದೆ. ನಾಗ್ಪುರದ ಸೋಲಾರ್ ಇಂಡಸ್ಟ್ರೀಸ್ ಇದನ್ನು ಅಭಿವೃದ್ಧಿಪಡಿಸಿದೆ. ಇದರ ಸಬ್ಸಿಡರಿ ಸಂಸ್ಥೆ ಎಕಾನಾಮಿಕ್ಸ್ ಎಕ್ಸ್‌ಪ್ಲೋಸಿವ್ಸ್ ಲಿಮಿಟೆಡ್‌ಗೆ ಭಾರತೀಯ ಸೇನೆ 480 ಡ್ರೋನ್‌ಗಳಿಗಾಗಿ ಆರ್ಡರ್ ನೀಡಿದೆ. 300 ಕೋಟಿ ರೂ. ಮೌಲ್ಯದ ಒಪ್ಪಂದವಾಗಿದೆ. 9 ಕೆಜಿಗಿಂತ ಹೆಚ್ಚಿನ ಸ್ಫೋಟಕ ಸಿಡಿತಲೆ ಹೊತ್ತೊಯ್ಯುವ ಸಾಮರ್ಥ್ಯ, ಜಿಪಿಎಸ್ ಆಧಾರಿತ ನಿಖರ ದಾಳಿ ಸಾಮರ್ಥ್ಯ, ಹಗಲು ಮತ್ತು ರಾತ್ರಿ ಬಳಕೆಯಾಗುವ ಕಣ್ಗಾವಲು ಕ್ಯಾಮೆರಾ, ಶತ್ರುವಿನ ರಹಸ್ಯ ನೆಲೆಗಳ ಗುರಿಯಾಗಿಸಿ ದಾಳಿ ಮಾಡುವ ಶಕ್ತಿಯನ್ನು ಈ ಡ್ರೋನ್ ಹೊಂದಿದೆ.

# ಸಾಲುದ್ದದ ಸುದ್ದಿಗಳು

## ಭ್ರೂಣ ಲಿಂಗ ಪತ್ತೆ ಬಗ್ಗೆ ಮಾಹಿತಿ ನೀಡಿದವರಿಗೆ ₹1 ಲಕ್ಷ ಬಹುಮಾನ



ಭ್ರೂಣ ಲಿಂಗ ಪತ್ತೆ ಬಗ್ಗೆ ಮಾಹಿತಿ ನೀಡಿದವರಿಗೆ ನೀಡುವ ಬಹುಮಾನವನ್ನು ₹50 ಸಾವಿರದಿಂದ ₹1 ಲಕ್ಷಕ್ಕೆ ಏರಿಕೆ ಮಾಡಿ ರಾಜ್ಯ ಆರೋಗ್ಯ ಇಲಾಖೆ ಸುತ್ತೋಲೆ ಹೊರಡಿಸಿದೆ. ಗರ್ಭಪೂರ್ವ ಮತ್ತು ಪ್ರಸವಪೂರ್ವ ಭ್ರೂಣಲಿಂಗ ಪತ್ತೆ ಕಾಯ್ದೆ (ಪಿಸಿಪಿಎನ್‌ಡಿಟಿ) ಅನುಷ್ಠಾನಕ್ಕೆ ಸಂಬಂಧಿಸಿದಂತೆ ಯಶಸ್ವಿಗೊಂಡ ಗುಪ್ತ ಕಾರ್ಯಾಚರಣೆಯಲ್ಲಿ ಮಾಹಿತಿ ನೀಡಿದವರಿಗೆ ಈ ಬಹುಮಾನ ನೀಡಲಾಗುವುದು. ಬಹುಮಾನದ ಮೊತ್ತದಲ್ಲಿ ₹50 ಸಾವಿರವನ್ನು ರಾಷ್ಟ್ರೀಯ ಆರೋಗ್ಯ ಅಭಿಯಾನದಿಂದಲೂ, ಇನ್ನುಳಿದ ₹50 ಸಾವಿರ ಮೊತ್ತವನ್ನು ಆಯಾ ಜಿಲ್ಲೆಗಳಲ್ಲಿ ಸಂಗ್ರಹವಾಗಿರುವ ಪಿಸಿಪಿಎನ್‌ಡಿಟಿ ಶುಲ್ಕದಿಂದ ಭರಿಸಬೇಕು ಎಂದು ತಿಳಿಸಲಾಗಿದೆ.

## ವಾಹನಗಳ ಎಚ್‌ಎಸ್‌ಆರ್‌ಪಿ ಫಲಕ ಅಳವಡಿಕೆ ಅವಧಿ ವಿಸ್ತರಣೆ




2019ರ ಏಪ್ರಿಲ್ 1ಕ್ಕಿಂತ ಹಿಂದೆ ನೋಂದಣಿಯಾದ ವಾಹನಗಳಿಗೆ ಅತಿ ಸುರಕ್ಷಿತ ನೋಂದಣಿ ಫಲಕ (ಎಚ್‌ಎಸ್‌ಆರ್‌ಪಿ) ಅಳವಡಿಸುವ ಅವಧಿಯನ್ನು ರಾಜ್ಯ ಸರ್ಕಾರವು ಸೆಪ್ಟೆಂಬರ್ 15, 2024ರವರೆಗೆ ವಿಸ್ತರಿಸಿ ಅಧಿಸೂಚನೆ ಹೊರಡಿಸಿದೆ. ವಾಹನ ಮಾಲೀಕರಿಂದ ಸೂಕ್ತ ಸ್ಪಂದನೆ ದೊರಕದಿರುವ ಹಿನ್ನೆಲೆಯಲ್ಲಿ ಹಳೆಯ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ಅಳವಡಿಸುವ ಅವಧಿಯನ್ನು ಮತ್ತೆ ಮೂರು ತಿಂಗಳ ಕಾಲ ವಿಸ್ತರಿಸಲಾಗಿದೆ. 2019ರ ಏಪ್ರಿಲ್ ನಂತರದ ವಾಹನಗಳ ನೋಂದಣಿ ಮಾಡಿಕೊಳ್ಳುವಾಗಲೇ ಎಚ್‌ಎಸ್‌ಆರ್‌ಪಿ ಅಳವಡಿಸಲಾಗಿರುತ್ತದೆ. ಅದಕ್ಕಿಂತ ಹಿಂದೆ ನೋಂದಣಿಯಾಗಿರುವ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ಅಳವಡಿಸಬೇಕಿದೆ. ಈ ಹಿಂದೆಯೂ ಗಡುವು ಹಲವು ಬಾರಿ ವಿಸ್ತರಿಸಲಾಗಿತ್ತು.

## 14 ಬೆಳೆಗಳ ಬೆಂಬಲ ಬೆಲೆ ಹೆಚ್ಚಿಸಿದ ಕೇಂದ್ರ ಸರ್ಕಾರ




ನೂತನ ಸರ್ಕಾರ ರಚನೆಗೊಂಡ ನಂತರ ನಡೆದ 2ನೇ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಒಟ್ಟು 14 ಬೆಳೆಗಳ ಬೆಂಬಲ ಬೆಲೆಯನ್ನು ಹೆಚ್ಚಿಸುವ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ. ಬೆಳೆ ಎಂಎಸ್‌ಪಿ (ಪ್ರತೀ ಕ್ವಿಂಟಾಲ್) ಸಾಮಾನ್ಯ ಭತ್ತ 117 ರೂ., ಹೈಬ್ರಿಡ್ ಬಿಳಿಜೋಳ 191 ರೂ., ಸಜ್ಜೆ 125 ರೂ., ರಾಗಿ 444 ರೂ., ಮೆಕ್ಕೆಜೋಳ 135 ರೂ., ತೊಗರಿಬೇಳೆ 550 ರೂ.ಹೆಸರುಬೇಳೆ 124 ರೂ., ಉದ್ದಿನಬೇಳೆ 450 ರೂ., ನೆಲಗಡಲೆ 406 ರೂ., ಸೂರ್ಯಕಾಂತಿ 520 ರೂ., ಸೋಯಾಬೀನ್(ಹಳದಿ) 292 ರೂ., ಎಳ್ಳು 632 ರೂ., ಹುಚ್ಚೆಳ್ಳು 983 ರೂ., ಹತ್ತಿ 501 ರೂ. ಹೆಚ್ಚಿಸಲಾಗಿದೆ.

## ಭಾರತದ ಬಳಿ ಪಾಕ್ ಗಿಂತ ಹೆಚ್ಚು ಪರಮಾಣು ಶಸ್ತ್ರಾಸ್ತ್ರ : ಎಸ್ ಐ ಪಿ ಆರ್ ಐ ವರದಿ

ಆರ್ಮ್ಸ್ ಟ್ರ್ಯಾಕರ್ ಸ್ಟಾಕ್‌ಹೋಮ್ ಇಂಟರ್‌ನ್ಯಾಷನಲ್ ಪೀಸ್ ರಿಸರ್ಚ್ ಇನ್‌ಸ್ಟಿಟ್ಯೂಟ್ (SIPRI)ನ ಇತ್ತೀಚಿನ ವರದಿಯ ಪ್ರಕಾರ, ಭಾರತವು 25 ವರ್ಷಗಳಲ್ಲಿ ಮೊದಲ ಬಾರಿಗೆ ಪಾಕಿಸ್ತಾನಕ್ಕಿಂತ ಹೆಚ್ಚು ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದಿದೆ. ಭಾರತದ ಬಳಿ ಅಂದಾಜು 172 ಸಿಡಿತಲೆಗಳು ಇದ್ದರೆ, ಪಾಕಿಸ್ತಾನದ ಬಳಿ 170 ಸಿಡಿತಲೆಗಳು ಇವೆ ಎಂದಿದೆ. ಅಲ್ಲದೇ ವರದಿಯ ಪ್ರಕಾರ, ಚೀನಾ ಇತ್ತೀಚೆಗೆ ತನ್ನ ಪರಮಾಣು ಶಸ್ತ್ರಾಸ್ತ್ರಗಳ ಸನ್ನದ್ಧತೆಯನ್ನು ಹೆಚ್ಚಿಸಿದೆ ಮತ್ತು ಸಂಭವನೀಯ ತ್ವರಿತ ದಾಳಿಗಳಿಗಾಗಿ ದೀರ್ಘ–ಶ್ರೇಣಿಯ ಕ್ಷಿಪಣಿಗಳೊಂದಿಗೆ ಅವುಗಳನ್ನು ಸಂಯೋಜಿಸಿದೆ. ವರದಿಯ ಪ್ರಕಾರ, ರಷ್ಯಾ, ಫ್ರಾನ್ಸ್, ಯುಕೆ, ಯುಎಸ್‌ಎ ಮತ್ತು ಇತ್ತೀಚೆಗೆ ಚೀನಾ ಬ್ಯಾಲಿಸ್ಟಿಕ್ ಕ್ಷಿಪಣಿಗಳ ಮೇಲೆ ಅನೇಕ ಸಿಡಿತಲೆಗಳನ್ನು ನಿಯೋಜಿಸುವ ಸಾಮರ್ಥ್ಯವನ್ನು ಹೊಂದಿದೆ, ಉತ್ತರ ಕೊರಿಯಾ, ಭಾರತ ಮತ್ತು ಪಾಕಿಸ್ತಾನವು ಅನುಸರಿಸುತ್ತಿವೆ.

# ಗುರು ಮತ್ತು ಶಿಷ್ಯ ಸಮಾಜಕ್ಕೆ ಸ್ಫೂರ್ತಿಯಾಗಿರುವ ಪ್ರೊಫೆಸರ್ ಶಾಂತಮ್ಮ


ಪ್ರೇರಣಾ



ಆಂಧ್ರಪ್ರದೇಶದ ವಿಜಯನಗರಂ ಸೆಂಚೂರಿಯನ್ ಯೂನಿವರ್ಸಿಟಿಯಲ್ಲಿ ವಾರಕ್ಕೆ ಆರು ಗಂಟೆಗಳು ಪಾಠ ಮಾಡುವ ಶಾಂತಮ್ಮ ಅವರ ಈಗಿನ ವಯಸ್ಸು ತೊಂಬತ್ತೈದು. ಸೇವೆಯಿಂದ ನಿವೃತ್ತಿಯಾಗಿ ಮೂವತ್ತೈದು ವರ್ಷಗಳು ಕಳೆದರೂ ವಿದ್ಯಾರ್ಥಿಗಳಿಗೆ ಕಲಿಸುವ ಹುಮ್ಮಸ್ಸು ಅವರಲ್ಲಿ ಕಡಿಮೆಯಾಗಿಲ್ಲ. ಅರವತ್ತು ಎಂದರೆ ಅರಳುಮರಳು ಎನ್ನುವ, ಹತ್ತಾರು ಖಾಯಿಲೆಗಳಿಂದ ಬಳಲುತ್ತಾ ಬದುಕೇ ಮುಗಿದು ಹೋಯಿತು ಎಂದುಕೊಳ್ಳುವ ಎಷ್ಟೋ ಮಂದಿಗೆ ಶಾಂತಮ್ಮ ಸ್ಫೂರ್ತಿ.

ಶಾಂತಮ್ಮ ಭೌತಶಾಸ್ತ್ರ ಪ್ರಾಧ್ಯಾಪಕಿಯಾಗಿ ಮೂರು ದಶಕಗಳ ಕಾಲ ಲಕ್ಷಾಂತರ ವಿದ್ಯಾರ್ಥಿಗಳಿಗೆ ಪಾಠ ಮಾಡಿದವರು. ಪ್ರಾಧ್ಯಾಪಕಿಯಾಗಿ ಮಾತ್ರವಲ್ಲದೆ ತನಿಖಾಧಿಕಾರಿಯಾಗಿ, ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್, ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಅಂತಹ ವಿವಿಧ ಕೇಂದ್ರ ಸರ್ಕಾರದ ಇಲಾಖೆಗಳಲ್ಲಿ ತನಿಖಾ ಉಸ್ತುವಾರಿಯಾಗಿಯೂ ಪ್ರಾಮಾಣಿಕತೆಯಿಂದ ಸಾರ್ಥಕ ಸೇವೆ ಮಾಡಿದವರು. ಸರ್ಕಾರದ ನಿಯಮದಂತೆ 1989ರಲ್ಲಿ ಅವರು ನಿವೃತ್ತಿಯಾದರು. ಆದರೆ ಅವರೊಳಗಿನ 'ಗುರು ಪ್ರಜ್ಞೆ' ಅವರನ್ನು ಸುಮ್ಮನೆ ಕೂರಲು ಬಿಡಲಿಲ್ಲ. ನಿವೃತ್ತಿಯಾದ ಮೇಲೂ ಬಳಪ ಹಿಡಿದು ಪಾಠ ಮಾಡಲು ನಿಂತರು. ಅದೆಷ್ಟೋ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಮಾದರಿಯಾದರು.






ಈಗ ಶಾಂತಮ್ಮ ಅವರಿಗೆ ತೊಂಬತ್ತೈದು ವಯಸ್ಸಾಗಿದ್ದರೂ ಬೆಳಗಿನ ಜಾವ ನಾಲ್ಕು ಗಂಟೆಗೆ ಎದ್ದು ಸ್ವಂತ ನೋಟ್ಸ್ ಮಾಡಿಕೊಳ್ಳುತ್ತಾರೆ. ತಾವು ವಾಸವಿರುವ ವಿಶಾಖಪಟ್ಟಣಂ ಊರಿನಿಂದ ವಿಜಯನಗರಂನಲ್ಲಿರುವ ಸೆಂಚುರಿಯನ್ ಕಾಲೇಜಿಗೆ ಬಸ್ಸಿನಲ್ಲಿ ಎರಡು ಗಂಟೆಗಳ ಕಾಲ ಪ್ರಯಾಣ ಮಾಡುತ್ತಾರೆ. ಅಂದರೆ ಸರಿ ಸುಮಾರು 65 ಕಿಲೋಮೀಟರ್ ಪ್ರಯಾಣ. ತರಗತಿಗೆ ಐದು ನಿಮಿಷ ತಡವಾಗಿಯೂ ಶಾಂತಮ್ಮ ಅವರು ಹೋಗುವುದಿಲ್ಲ. ರಜೆ ಇರುವಾಗಲೂ ವಿಶೇಷ ತರಗತಿಗಳನ್ನು ತೆಗೆದುಕೊಳ್ಳುತ್ತಾರೆ.

> "ಸರ್ಕಾರದ ಆದೇಶದಂತೆ 1989ರಲ್ಲಿ ಅಂದರೆ ನನ್ನ ಅರವತ್ತನೆ ವಯಸ್ಸಿನಲ್ಲಿ ನಾನು ನಿವೃತ್ತಿಯಾದೆ. ಆದರೆ ನನ್ನ ದೇಹಕ್ಕೆ ನಿವೃತ್ತಿ ಹೇಳುವ ಮನಸ್ಸು ನನಗಿರಲಿಲ್ಲ"
>
> –ಪ್ರೊಫೆಸರ್ ಚಿಲುಕುರಿ ಶಾಂತಮ್ಮ.

ಅವರದ್ದು ಈಗಲೂ ಗಟ್ಟಿ ಧ್ವನಿ. ಹಾಗೆ ಬೋರ್ಡ್ ಮೇಲೂ ಸರಾಗವಾಗಿ ಬರೆಯುತ್ತಾರೆ. "ಶಾಂತಮ್ಮ ಟೀಚರ್ ನಮಗೆ ರೋಲ್ ಮಾಡೆಲ್" ಎಂದು ಸೆಂಚುರಿಯನ್ ಕಾಲೇಜಿನ ನೂರಾರು ವಿದ್ಯಾರ್ಥಿಗಳು ಹೇಳುತ್ತಿದ್ದಾರೆ. ಶಾಂತಮ್ಮ ಅವರ ಮಾರ್ಗದರ್ಶನದಲ್ಲಿ ಈವರೆಗೂ ಹತ್ತೊಂಬತ್ತು ಮಂದಿ ಪಿ ಎಚ್ ಡಿ ಪದವಿ ಪಡೆದಿದ್ದಾರೆ. ಶಾಂತಮ್ಮ ಅವರು ಜಗತ್ತಿನ ಹಿರಿಯ ಪ್ರಾಧ್ಯಾಪಕಿಯಾಗಿ ಗುರುತಿಸಿಕೊಂಡು ಯುಎಸ್, ಬ್ರಿಟನ್, ಕೆನಡಾ, ಸ್ಪೇನ್ ದೇಶಗಳಿಗೆ ಭೇಟಿಕೊಡುವುದರ ಮೂಲಕ ಯಶಸ್ವಿ ಮಹಿಳೆ ಎನಿಸಿಕೊಂಡಿದ್ದಾರೆ. ಎರಡು ವರ್ಷಗಳ ಹಿಂದೆ ಶಾಂತಮ್ಮ ಅವರ ಹೆಸರು ಗಿನ್ನಿಸ್ ರೆಕಾರ್ಡ್‌ಗೆ ಸೇರಲು ಪ್ರವೇಶಾತಿ ಪಡೆದಿತ್ತು. ಅವರು ಈಗ ವಿಶ್ವದ ಹಿರಿಯ ಪ್ರಾಧ್ಯಾಪಕಿ. ಅಚ್ಚರಿ ಎಂದರೆ ವಿದ್ಯಾರ್ಥಿಗಳಿಗೆ ಪಾಠ ಮಾಡುವುದರ ಜತೆಗೆ ಕ್ಯಾನ್ಸರ್ ರೋಗಕ್ಕೆ ಸಂಬಂಧಿಸಿದ ಸಂಶೋಧನೆ ಕೆಲಸವನ್ನೂ ಶಾಂತಮ್ಮ ಶುರುಮಾಡಿದ್ದಾರೆ.

ವೃತ್ತಿ ಮತ್ತು ಬದುಕಿನ ಮೇಲಿನ ಪ್ರೀತಿ, ಸಮಯ ಪ್ರಜ್ಞೆ, ಪ್ರಾಮಾಣಿಕತೆ, ಸೇವಾ ಮನೋಭಾವ ಶಾಂತಮ್ಮ ಅವರನ್ನು ಅತೀ ಎತ್ತರಕ್ಕೆ ಕೊಂಡೊಯ್ದಿದೆ. "ಪಾಠ ಮಾಡಿಯೇ ಸಾಯುತ್ತೇನೆ" ಎಂದು ಹೇಳುವ ಶಾಂತಮ್ಮ ಗುರು ಮತ್ತು ಶಿಷ್ಯ ಸಮಾಜಕ್ಕೆ ಸ್ಫೂರ್ತಿ. ವಯಸ್ಸಿನ ನೆಪ ಹೇಳಿಕೊಂಡು ಕೊರಗಿ ಕೂರುವವರಿಗೆ ಮಾದರಿ. ಶಾಂತಮ್ಮ ಅವರ ಬದುಕು ನಮ್ಮೊಳಗೆ ಚೈತನ್ಯ ತುಂಬಲಿ.

ಪುಂಗವ PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th JUNE 2024
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2024-2026 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26
FORTNIGHTLY 01-07-2024



## ನಾಗಪುರ: ಕಾರ್ಯಕರ್ತ ವಿಕಾಸ ವರ್ಗ – ದ್ವಿತೀಯ ಸಂಪನ್ನ



ಮೇ 16ರಿಂದ ಜೂನ್ 11, 2024ರವರೆಗೆ ರಾಷ್ಟ್ರೀಯ ಸ್ವಯಂಸೇವಕ ಸಂಘದ 'ಕಾರ್ಯಕರ್ತ ವಿಕಾಸ ವರ್ಗ– ದ್ವಿತೀಯ' ನಾಗಪುರದ ಡಾ.ಹೆಡಗೇವಾರ್ ಸ್ಮೃತಿಮಂದಿರ ಪರಿಸರದಲ್ಲಿ ನಡೆಯಿತು. ಜೂನ್ 10 ರಂದು ಸಾರ್ವಜನಿಕ ಸಮಾರೋಪ ಸಮಾರಂಭ ಜರುಗಿತು. ಕಾರ್ಯಕ್ರಮದಲ್ಲಿ ರಾಜಸ್ಥಾನದ ಶ್ರೀ ಕ್ಷೇತ್ರ ಗೋದಾವರಿ ಧಾಮದ ಪೀಠಾಧೀಶ ಮಹಂತ ಗುರುದೇವ ಶ್ರೀ ರಾಮಗಿರಿ ಮಹಾರಾಜ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಸ್ವಯಂಸೇವಕರನ್ನುದ್ದೇಶಿಸಿ ಮಾತನಾಡಿದರು. ಸರ್ದಾರ್ ಇಕ್ಬಾಲ್ ಸಿಂಗ್ ಅವರು ಶಿಬಿರದ ಸರ್ವಾಧಿಕಾರಿಯಾಗಿದ್ದರು. ರಾಷ್ಟ್ರಾದ್ಯಂತದಿಂದ 932 ಶಿಕ್ಷಾರ್ಥಿಗಳು ವರ್ಗದಲ್ಲಿ ಭಾಗವಹಿಸಿದರು. ಕರ್ನಾಟಕ ದಕ್ಷಿಣ ಪ್ರಾಂತದ 22 ಶಿಕ್ಷಾರ್ಥಿಗಳು, ಕರ್ನಾಟಕ ಉತ್ತರ ಪ್ರಾಂತದ 22 ಶಿಕ್ಷಾರ್ಥಿಗಳು ವರ್ಗದಲ್ಲಿ ಭಾಗವಹಿಸಿದರು. ಸಂಘದ ಭೌಗೋಳಿಕ ರಚನೆಯಂತೆ 11 ಕ್ಷೇತ್ರಗಳ 46 ಪ್ರಾಂತಗಳಿಂದ ಶಿಕ್ಷಾರ್ಥಿಗಳು ಭಾಗವಹಿಸಿದ್ದರು. ವರ್ಗದಲ್ಲಿ ಸರಸಂಘಚಾಲಕ ಡಾ. ಮೋಹನ್ ಭಾಗವತ್, ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ, ಸಹಸರಕಾರ್ಯವಾಹರುಗಳಾದ ಡಾ. ಕೃಷ್ಣಗೋಪಾಲ್, ಮುಕುಂದ ಸಿ.ಆರ್., ಅರುಣ್ ಕುಮಾರ್, ರಾಮದತ್ತ ಚಕ್ರಧರ್, ಅಲೋಕ್ ಕುಮಾರ್, ಅತುಲ್ ಲಿಮಯೇ ಹಾಗೂ ಎಲ್ಲಾ ಅಖಿಲ ಭಾರತೀಯ ಅಧಿಕಾರಿಗಳು ವಿವಿಧ ವಿಷಯಗಳಲ್ಲಿ ಪ್ರಶಿಕ್ಷಣಾರ್ಥಿಗಳೊಂದಿಗೆ ಸಂವಾದ–ಬೌದ್ಧಿಕ – ಸಂವಾದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು.

## ನಾಟಕದಲ್ಲಿ ಸೀತಾರಾಮರ ಕುರಿತು ಅಪಹಾಸ್ಯ: ವಿದ್ಯಾರ್ಥಿಗಳಿಗೆ 1.2 ಲಕ್ಷ ರೂ. ದಂಡ




ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ) ಬಾಂಬೆಯು, ಸಂಸ್ಥೆಯ ಕಾರ್ಯಕ್ರಮವೊಂದರಲ್ಲಿ ವಿದ್ಯಾರ್ಥಿಗಳ ತಂಡವೊಂದು ಪ್ರದರ್ಶಿಸಿದ ನಾಟಕದಲ್ಲಿ ರಾಮಾಯಣವನ್ನು ಅವಹೇಳನಕಾರಿಯಾಗಿ ಚಿತ್ರಿಸಿದ ಪರಿಣಾಮ ವಿದ್ಯಾರ್ಥಿಗಳಿಗೆ ಬರೋಬ್ಬರಿ 1.2 ಲಕ್ಷ ರೂಪಾಯಿಗಳ ದಂಡ ವಿಧಿಸಿದೆ.

ಈ ವರ್ಷದ ಮಾರ್ಚ್‌ನಲ್ಲಿ ನಡೆದ ಇನ್‌ಸ್ಟಿಟ್ಯೂಟ್‌ನ ಪರ್ಫಾರ್ಮಿಂಗ್ ಆರ್ಟ್ಸ್ ಫೆಸ್ಟಿವಲ್‌ನಲ್ಲಿ "ರಾಹೋವನ್" ಶೀರ್ಷಿಕೆಯ ನಾಟಕವನ್ನು ವಿದ್ಯಾರ್ಥಿಗಳ ತಂಡವೊಂದು ಪ್ರದರ್ಶಿಸಿತ್ತು. ಇದರಲ್ಲಿ ಹಿಂದೂ ಧರ್ಮವನ್ನು ಮತ್ತು ಸೀತಾರಾಮರನ್ನು ಅವಹೇಳನಕಾರಿಯಾಗಿ ಬಿಂಬಿಸಲಾಗಿತ್ತು. ಈ ಬಗ್ಗೆ ವಿದ್ಯಾರ್ಥಿಗಳ ಒಂದು ವಿಭಾಗ ಪ್ರತಿಭಟನೆ ನಡೆಸಿದ ತರುವಾಯ ಸಂಸ್ಥೆಯು ನಾಟಕ ಪ್ರದರ್ಶಿಸಿದ ವಿದ್ಯಾರ್ಥಿಗಳಿಗೆ ಸುಮಾರು ಒಂದು ಸೆಮಿಸ್ಟರ್ ಶುಲ್ಕಕ್ಕೆ ಸಮಾನವಾದ ರೂ 1.2 ಲಕ್ಷ ದಂಡವನ್ನು ವಿಧಿಸಿದೆ.

ನಾಟಕಕ್ಕೆ ಸಂಬಂಧಿಸಿದ ದೂರುಗಳ ಪರಿಹಾರಕ್ಕೆ ಮೇ 8ರಂದು ಶಿಸ್ತು ಸಮಿತಿ ಸಭೆ ಕರೆಯಲಾಗಿತ್ತು. ನಾಟಕದಲ್ಲಿ ಭಾಗವಹಿಸಿದ್ದ ಮತ್ತು ಪ್ರತಿಭಟಿಸಿದ ವಿದ್ಯಾರ್ಥಿಗಳು ಸಭೆಯಲ್ಲಿ ಭಾಗವಹಿಸಿದ್ದರು. ಅಲ್ಲಿ ನಡೆದ ಚರ್ಚೆಗಳ ಆಧಾರದ ಮೇಲೆ ಸಮಿತಿಯು ಶಿಕ್ಷಾರ್ಹ ಕ್ರಮಗಳನ್ನು ಶಿಫಾರಸು ಮಾಡಿದೆ ಎನ್ನಲಾಗಿದೆ.

## ಜಮ್ಮು–ಕಾಶ್ಮೀರಕ್ಕೆ ಶೀಘ್ರ ರಾಜ್ಯ ಸ್ಥಾನ

ಶ್ರೀನಗರ: ಜಮ್ಮು–ಕಾಶ್ಮೀರದಲ್ಲಿ 370ನೇ ವಿಧಿಯು ತೆರವಾಗಿದ್ದು, ಸಂವಿಧಾನದ ಫಲಗಳು ಖಾತ್ರಿಯಾಗುತ್ತಿವೆ ಎಂದ ಪ್ರಧಾನಿ ನರೇಂದ್ರ ಮೋದಿಯವರು, ವಿಧಾನಸಭೆ ಚುನಾವಣೆಗೆ ಸಿದ್ಧತೆಗಳು ಆರಂಭವಾಗಿದ್ದು ಕೇಂದ್ರಾಡಳಿತ ಪ್ರದೇಶ ಶೀಘ್ರದಲ್ಲೇ ತನ್ನ ರಾಜ್ಯ ಸ್ಥಾನಮಾನ ಮರಳಿ ಪಡೆಯಲಿದೆ ಎಂದು ಭರವಸೆ ನೀಡಿದರು.



ಮೂರನೇ ಬಾರಿಗೆ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದನಂತರ ಮೊದಲ ಬಾರಿಗೆ ಜಮ್ಮು–ಕಾಶ್ಮೀರಕ್ಕೆ ಎರಡು ದಿನಗಳ ಭೇಟಿ ನೀಡಿದ ಮೋದಿ, ಶ್ರೀನಗರದ ಶೇರ್–ಎ–ಕಾಶ್ಮೀರ್ ಇಂಟರ್ ನ್ಯಾಶನಲ್ ಕನ್ವೆನ್ಷನ್ ಕಾಂಪ್ಲೆಕ್ಸ್‌ನಲ್ಲಿ (ಎಸ್‌ಕೆಐಸಿಸಿ) ನಡೆದ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು. ಜಮ್ಮು–ಕಾಶ್ಮೀರಕ್ಕೆ ವಿಧಾನಸಭಾ ಚುನಾವಣೆಗೆ ಸಿದ್ಧತೆಗಳು ಪ್ರಾರಂಭವಾಗಿವೆ. ನಿಮ್ಮ ಮತದಿಂದ ನೀವು ಸರ್ಕಾರವನ್ನು ಆಯ್ಕೆ ಮಾಡುವ ಸಮಯ ದೂರವಿಲ್ಲ ಎಂದು ಹೇಳಿದರು.

ಯೋಜನೆಗಳಿಗೆ ಚಾಲನೆ: ಇದಕ್ಕೂ ಮುನ್ನ ಅವರು, ಸುಮಾರು 1500 ಕೋಟಿ ರೂ. ಮೊತ್ತದ ಹಲವು ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಿದರು ಮತ್ತು ಶಂಕುಸ್ಥಾಪನೆ ನೆರವೇರಿಸಿದರು.

## ನಳಂದಾ ವಿಶ್ವವಿದ್ಯಾನಿಲಯ ಉದ್ಘಾಟನೆ

ನಳಂದಾ ವಿಶ್ವವಿದ್ಯಾಲಯ ಭಾರತದ ಪ್ರಾಚೀನ ವಿಶ್ವವಿದ್ಯಾಲಯಗಳಲ್ಲಿ ಒಂದು ಎಂಬ ಖ್ಯಾತಿ ಪಡೆದಿದೆ. 1600 ವರ್ಷಗಳಷ್ಟು ಪುರಾತನ ವಿಶ್ವವಿದ್ಯಾಲಯವನ್ನು 800 ವರ್ಷಗಳ ಹಿಂದೆ ಭಕ್ತಿಯಾರ್ ಕಿಲ್ಜಿ ಧ್ವಂಸಗೊಳಿಸಿದ್ದ. ಅದರ ಗತವೈಭವ ಇದೀಗ ಮರಳಿದ್ದು ಬಿಹಾರದ ರಾಜ್‌ಗೀರ್‌ನಲ್ಲಿ ನಳಂದಾ ವಿಶ್ವವಿದ್ಯಾಲಯದ ಹೊಸ ಕ್ಯಾಂಪಸ್‌ನ್ನು ಪ್ರಧಾನಿ ನರೇಂದ್ರ ಮೋದಿ ಅವರು ಉದ್ಘಾಟಿಸಿದ್ದಾರೆ.

ನಳಂದ ವಿಶ್ವವಿದ್ಯಾನಿಲಯ 1749 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣಗೊಂಡಿದ್ದು, 455 ಎಕರೆ ಹೊಸ ಕ್ಯಾಂಪಸ್ ಅನ್ನು ಒಳಗೊಂಡಿದೆ. ಪಟನಾದ ಆಗ್ನೇಯಕ್ಕೆ ಸುಮಾರು 95 ಕಿಮೀ ದೂರದಲ್ಲಿರುವ ನಳಂದ ವಿಶ್ವವಿದ್ಯಾಲಯವು ವಿಶ್ವದ ಮೊದಲ ವಸತಿ ವಿಶ್ವವಿದ್ಯಾಲಯಗಳಲ್ಲಿ ಒಂದಾಗಿತ್ತು. ಇದನ್ನು ಗುಪ್ತ ರಾಜವಂಶದ ಕುಮಾರಗುಪ್ತ–1 (ಕ್ರಿ.ಶ. 413–455) ಸ್ಥಾಪಿಸಿದ್ದ. ಆದರೆ 12ನೇ ಶತಮಾನದಲ್ಲಿ ಇದನ್ನು ದಾಳಿಕೋರರು ಧ್ವಂಸಗೊಳಿಸಿದ್ದರು.

2010ರಲ್ಲಿ ನಳಂದ ವಿಶ್ವವಿದ್ಯಾಲಯ ಕಾಯ್ದೆಯ ಮೂಲಕ ವಿಶ್ವವಿದ್ಯಾಲಯದ ಪುನರುಜ್ಜೀವನಕ್ಕೆ ಮುನ್ನುಡಿ ಬರೆಯಲಾಯಿತು. ಅದು 2014ರಲ್ಲಿ ಕಾರ್ಯನಿರ್ವಹಿಸಲು ಪ್ರಾರಂಭಿಸಿತು. ಈಗ ಅದರ ಕ್ಯಾಂಪಸ್ 455 ಎಕರೆ ಪ್ರದೇಶದಲ್ಲಿ 1749 ಕೋಟಿ ರು. ವೆಚ್ಚದಲ್ಲಿ ತಲೆ




ಎತ್ತಿ ನಿಂತಿದೆ. 2016ರ ಜುಲೈನಲ್ಲಿ ನಳಂದ ವಿವಿಯ ಅವಶೇಷಗಳನ್ನು ಯುನೆಸ್ಕೋ ವಿಶ್ವ ಪರಂಪರೆಯ ತಾಣವೆಂದು ಘೋಷಿಸಲಾಗಿತ್ತು.

ಈ ವಿಶ್ವವಿದ್ಯಾಲಯವು ಭಾರತವನ್ನು ಹೊರತುಪಡಿಸಿ 17 ಇತರ ರಾಷ್ಟ್ರಗಳ ಪಾಲುದಾರಿಕೆ ಹೊಂದಿದೆ. ಪಾಲುದಾರಿಕೆಯಲ್ಲಿ ಆಸ್ಟ್ರೇಲಿಯಾ, ಬಾಂಗ್ಲಾ ದೇಶ, ಭೂತಾನ್, ಬ್ರೂನಿ, ಕಾಂಬೋಡಿಯಾ, ಚೀನಾ, ಇಂಡೋನೇಷಿಯಾ, ಲಾವೋಸ್, ಮಾರಿಷಸ್, ಮ್ಯಾನ್ಮಾರ್, ನ್ಯೂಜಿಲೆಂಡ್, ಪೋರ್ಚುಗಲ್, ಸಿಂಗಾಪುರ, ದ.ಕೊರಿಯಾ, ಶ್ರೀಲಂಕಾ, ಥಾಯ್ಲೆಂಡ್ ಮತ್ತು ವಿಯೆಟ್ನಾಂ ಈ ದೇಶಗಳು ಭಾರತದ ಜತೆ ಪಾಲುದಾರಿಕೆಗೆ ಹಲವು ವರ್ಷಗಳ ಹಿಂದೆ ಸಹಿ ಹಾಕಿದ್ದವು.

ಕ್ಯಾಂಪಸ್‌ನಲ್ಲಿ 40 ತರಗತಿ ಕೊಠಡಿಗಳೊಂದಿಗೆ ಎರಡು ಶೈಕ್ಷಣಿಕ ಬ್ಲಾಕ್‌ಗಳಿವೆ, ಒಟ್ಟು 1,900 ಆಸನ ಸಾಮರ್ಥ್ಯವಿದೆ. ಇದು ತಲಾ 300 ಆಸನಗಳ ಸಾಮರ್ಥ್ಯ ದ 2 ಸಭಾಂಗಣಗಳನ್ನು ಹೊಂದಿದೆ. ಸುಮಾರು 550 ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಹೊಂದಿರುವ ಹಾಸ್ಟೆಲ್ ಇದೆ. ಇದು ಅಂತಾರಾಷ್ಟ್ರೀಯ ಕೇಂದ್ರ, 2000 ವ್ಯಕ್ತಿಗಳಿಗೆ ಅವಕಾಶ ಕಲ್ಪಿಸುವ ಆಂಫಿಥಿಯೇಟರ್, ಅಧ್ಯಾಪಕರ ಕ್ಲಬ್ ಮತ್ತು ಕ್ರೀಡಾ ಸಂಕೀರ್ಣ ಸೇರಿದಂತೆ ಹಲವಾರು ಇತರ ಸೌಲಭ್ಯಗಳನ್ನು ಹೊಂದಿದೆ. ಸೌರ ಸ್ಥಾವರ, ನೀರಿನ ಸಂಸ್ಕರಣಾ ಘಟಕಗಳು, ತ್ಯಾಜ್ಯ ನೀರು ಮರುಬಳಕೆ ಘಟಕ, 100 ಎಕರೆ ಜಲಮೂಲವನ್ನೂ ಹೊಂದಿದೆ.

## ಇಎಸ್ ಐಸಿಗೆ 1.64 ಮಿಲಿಯನ್ ಹೊಸ ಉದ್ಯೋಗಿಗಳು ಸೇರ್ಪಡೆ

ಉದ್ಯೋಗಿಗಳ ರಾಜ್ಯ ವಿಮಾ ನಿಗಮ (ಇಎಸ್‌ಐಸಿ) ಏಪ್ರಿಲ್‌ನಲ್ಲಿ ರಾಷ್ಟ್ರಾದ್ಯಂತ 1.64 ಮಿಲಿಯನ್ ಹೊಸ ಸದಸ್ಯರನ್ನು ಸೇರಿಸಿದೆ ಎಂದು ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ ಬಿಡುಗಡೆ ಮಾಡಿದ ವೇತನದಾರರ ಅಂಕಿಅಂಶಗಳು ತಿಳಿಸಿವೆ.

ಸಚಿವಾಲಯ ಬಿಡುಗಡೆಗೊಳಿಸಿದ ದತ್ತಾಂಶದಲ್ಲಿ ಹೊಸ ಸೇರ್ಪಡೆಗಳಲ್ಲಿ 784,000 ಮಂದಿ 25 ವರ್ಷದೊಳಗಿನ ಯುವ ಉದ್ಯೋಗಿಗಳು ಇದ್ದಾರೆ. ವೇತನದಾರರ ದತ್ತಾಂಶದ ಪ್ರಕಾರ ಏಪ್ರಿಲ್‌ನಲ್ಲಿ 338,000 ಮಹಿಳೆಯರ ನೋಂದಣಿ ಆಗಿದೆ. 53 ಟ್ರಾನ್ಸ್‌ಜೆಂಡರ್ ಉದ್ಯೋಗಿಗಳು ಸಹ ಇಎಸ್‌ಐ ಅಡಿಯಲ್ಲಿ ನೋಂದಾಯಿಸಿಕೊಂಡಿದ್ದಾರೆ.

ಇಎಸ್ ಐಸಿಯ ಸಾಮಾಜಿಕ ಭದ್ರತಾ ಯೋಜನೆಯಡಿಯಲ್ಲಿ ಸುಮಾರು 18,490 ಹೊಸ ಸಂಸ್ಥೆಗಳನ್ನು ಸೇರಿಸಿಕೊಳ್ಳುವುದರ ಮೂಲಕ ಹೆಚ್ಚಿನ ಕಾರ್ಮಿಕರಿಗೆ ವ್ಯಾಪ್ತಿಯನ್ನು ವಿಸ್ತರಿಸಲಾಗಿದೆ ಎಂದಿದೆ. "ಏಪ್ರಿಲ್ ಮಾಸಿಕದಲ್ಲಿ ಒಟ್ಟು 1.64 ಮಿಲಿಯನ್ ಉದ್ಯೋಗಿಗಳನ್ನು ಸೇರ್ಪಡಗೊಳಿಸಲಾಗಿದ್ದು, ಇದು ರಾಷ್ಟ್ರದ ಯುವಕರಿಗೆ ಹೆಚ್ಚಿನ ಉದ್ಯೋಗಗಳನ್ನು ಸೃಷ್ಟಿಸಲಾಗಿದೆ ಎಂಬುದಕ್ಕೆ ಸಾಕ್ಷಿಯಾಗಿದೆ. ಒಟ್ಟು ನೋಂದಣಿಗಳಲ್ಲಿ ಸುಮಾರು 47.60% ನಷ್ಟು ಮಂದಿ ಅಂದರೆ 784,000 ಉದ್ಯೋಗಿಗಳು 25 ವರ್ಷ ವಯಸ್ಸಿನ ಗುಂಪಿಗೆ ಸೇರಿದ್ದಾರೆ" ಎಂದು ಕಾರ್ಮಿಕ ಸಚಿವಾಲಯ ತಿಳಿಸಿದೆ. ಮಾರ್ಚ್‌ನಲ್ಲಿ, ಇಪಿಎಫ್‌ಒ 1.44 ಮಿಲಿಯನ್ ನಿವ್ವಳ ಸದಸ್ಯರನ್ನು ಸೇರಿಸಿತ್ತು.




ಓದುಗರೇ ಗಮನಿಸಿ
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.